ಪದ್ಮಭೂಷಣ

# ಡಾ|| ಕೆ. ವೆಂಕಟಲಕ್ಷ್ಮಮ್ಮ



ಲೇಖಕರು

ಲಲಿತ ಶ್ರೀನಿವಾಸನ್

ಪ್ರಕಟಣೆ

**ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ**

ಬೆಂಗಳೂರು

# ಪದ್ಮಭೂಷಣ

# ಡಾ|| ಕೆ. ವೆಂಕಟಲಕ್ಷ್ಮಮ್ಮ

ಲೇಖಕರು

ಲಲಿತ ಶ್ರೀನಿವಾಸನ್

ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ

14/3, ನೃಪತುಂಗ ರಸ್ತೆ,

ಬೆಂಗಳೂರು-560 002

**Padmabhushana Dr. K Venkatalakshamma** –A Biographical Sketch of a distinguished Bharathanatyam exponent (Mysore School), by Lalitha Srinivasan, Director, NUPURA, No. 4, 12th Cross, 8th Main, Malleswaram, Bangalore-560 003

**First Edition : 1995**

Chief Editor

**S. N. Chandrasekhar**

Editor

**H. N. Suresh**

**Published by**

**The Karnataka Sangeeta Nritya Academy**

**14/3, Nrupatunga Road**

**Bangalore-560 002**

COVER PICTURE : Dr. K. Venkatalakshamma

PHOTO : G. Srinivasa Murthy

BACK COVER : Lalitha Srinivasan with Guru Dr. K. Venkatalakshamma.

**Rs. : 10/-**

Printed at

**SREE RANGA PRINTERS & BINDERS**

Hanumanthanagar, Bangalore-560 019

Phone : 602 333

# ಅಧ್ಯಕ್ಷರ ನುಡಿ

**1995** : ಪುನರ್‌ರಚಿತ ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಗೆ ಹರುಷದ ವರುಷ. 1955ರಲ್ಲಿ ಈ ಅಕಾಡೆಮಿ ಉದ್ಘಾಟನೆಯಾಗಿ ಈ ವರ್ಷ ತನ್ನ 40ನೆಯ ವಾರ್ಷಿಕೋತ್ಸವವನ್ನು ಈಗ ಸಂಭ್ರಮದಿಂದ ಆಚರಿಸುತ್ತಿದೆ.

'ನಲವತ್ತರ ನಲಿವು' ಯೋಜನೆಯಡಿ ಅಕಾಡೆಮಿ ಹಮ್ಮಿಕೊಂಡಿರುವ ಹಲವಾರು ಕಾರ್ಯಕ್ರಮಗಳಲ್ಲಿ ಪ್ರಕಟಣಾ ಕಾರ್ಯವೂ ಒಂದು ಶಾಶ್ವತವಾಗಿ ನಿಲ್ಲುವ ಕೆಲಸವಾಗಿದೆ. ಕರ್ನಾಟಕದ ಹಲವಾರು ಹಿರಿಯ ಕಲಾವಿದರ ಜೀವನ ಚರಿತ್ರೆಗಳನ್ನು ಪುಸ್ತಕ ಮಾಲೆಯಾಗಿ ಪ್ರಕಟಿಸಲು ಅಕಾಡೆಮಿ ನಿರ್ಧರಿಸಿದೆ.

ಕರ್ನಾಟಕದ ಕಲಾವಿದರ ವಿಷಯಗಳು ಕೇವಲ ಕರ್ನಾಟಕ ಪ್ರಾಂತ್ಯಕ್ಕೆ ಮಾತ್ರ ಸೀಮಿತವಾಗಿದೆ ಅವರ ಹಿರಿಮೆ ಕೊಡುಗೆಗಳನ್ನು ದೇಶದ ಇತರ ಪ್ರಾಂತ್ಯಗಳಿಗೆ ಪರಿಚಯಿಸಲು ಇಂಗ್ಲಿಷ್ ಭಾಷೆಯಲ್ಲೂ ಈ ಪುಸ್ತಕ ಮಾಲೆಯನ್ನು ಪ್ರಕಟಿಸಬೇಕೆಂಬ ಪ್ರಮುಖ ನಿರ್ಧಾರವನ್ನು ಅಕಾಡೆಮಿ ಕೈಗೊಂಡಿದೆ.

ಈ ಪುಸ್ತಕ ಮಾಲಿಕೆಯಲ್ಲಿ ಪದ್ಮಭೂಷಣ ಡಾ|| ಕೆ. ವೆಂಕಟಲಕ್ಷ್ಮಮ್ಮನವರ ಜೀವನ ಚರಿತ್ರೆಯನ್ನು ಸಂಕ್ಷಿಪ್ತವಾಗಿ ಹೊರತಂದು ಓದುಗರ ಮುಂದೆ ಇಡುತ್ತಿದ್ದೇವೆ.

ಮೈಸೂರು ಸಂಪ್ರದಾಯ ನೃತ್ಯಶೈಲಿ ಭರತನಾಟ್ಯ ಚರಿತ್ರೆಯಲ್ಲಿ ಒಂದು ವಿಶಿಷ್ಟ ಸ್ಥಾನವನ್ನು ಪಡೆದಿದೆ.

ಅನೇಕಾನೇಕ ನೃತ್ಯಕಲಾವಿದೆಯರು. ನೃತ್ಯಗುರುಗಳು–ನೃತ್ಯೋಪಾಸಕರು ಈ ದೈವಿಕ ಕಲೆಯನ್ನು ಕಾಪಾಡಿಕೊಂಡು ಬಂದುದರ ಕಾರಣದಿಂದ ಇಂದು ನಾವು ಅದರ ವೈಭವವನ್ನು ಹೆಮ್ಮೆಯಿಂದ ಕಾಣುವಂತಾಗಿದೆ.

ಮೈಸೂರು ಸಂಸ್ಥಾನದ ರಾಜಮಹಾರಾಜರ ಆಸ್ಥಾನದಲ್ಲಿ ಕೆಲವು ನೃತ್ಯ ಕಲಾವಿದೆಯರು ಆಸ್ಥಾನ ವಿದುಷಿಯರಾಗಿ ಮೆರೆಯುತ್ತಿದ್ದರು. ಅವರಲ್ಲಿ ಅತ್ಯಂತ ಹೆಸರುವಾಸಿಯಾಗಿ ಮೈಸೂರು ಭರತನಾಟ್ಯ ಸಂಪ್ರದಾಯಕ್ಕೆ ಕೀರ್ತಿ ತಂದವರಲ್ಲಿ ಪದ್ಮಭೂಷಣ ಡಾ॥ ಕೆ. ವೆಂಕಟಲಕ್ಷಮ್ಮನವರನ್ನು ನಾವು ಇಂದು ವಿಶೇಷ ಗೌರವದಿಂದ ಕಾಣುತ್ತೇವೆ. ಅಂತಹ ಓರ್ವ ಶ್ರೇಷ್ಠ ಕಲಾವಿದೆಯ ಜೀವನ ಚರಿತ್ರೆಯನ್ನು ಕರ್ನಾಟಕದ ಹೆಸರಾಂತ ಕಲಾವಿದೆ ಶ್ರೀಮತಿ ಲಲಿತ ಶ್ರೀನಿವಾಸನ್ ಶ್ರಮವಹಿಸಿ ಬರೆದು ಸಹಕರಿಸಿದ್ದಾರೆ. ಅವರಿಗೆ ನಮ್ಮ ವಂದನೆಗಳು.

ಇನ್ನು ಅಕಾಡೆಮಿಯ ಪ್ರಕಟಣಾ ಸಮಿತಿಯಲ್ಲಿ ಶ್ರೀ ಎಸ್. ಎನ್. ಚಂದ್ರಶೇಖರ್ ಪ್ರಧಾನ ಸಂಪಾದಕತ್ವವನ್ನೂ ಹಾಗೂ ಶ್ರೀ ಎಚ್. ಎನ್. ಸುರೇಶ್ ಸಂಪಾದಕತ್ವವನ್ನು ವಹಿಸಿಕೊಂಡು ಈ ಪ್ರಕಟಣಾ ಮಾಲಿಕೆಗಳ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿರ್ವಹಿಸುವರೆಂಬ ವಿಶ್ವಾಸ ನನಗಿದೆ.

'ನಲವತ್ತರ ನಲಿವು' ಯೋಜನೆಯಡಿ ಪ್ರಕಟಿಸುವ ಎಲ್ಲ ಪುಸ್ತಕಗಳನ್ನೂ ಕರ್ನಾಟಕದ ಕಲಾವಿದರು–ಸಾಹಿತಿಗಳು–ಎಲ್ಲ ಓದುಗರೂ ಸ್ವಾಗತಿಸಿ, ಪ್ರೋತ್ಸಾಹಿಸುವರೆಂಬ ದೃಢ ನಂಬಿಕೆ ನನಗಿದೆ.

ಅಧ್ಯಕ್ಷರು
ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ

# ಪ್ರಧಾನ ಸಂಪಾದಕರ ನುಡಿ

ಒಂದು ಭವ್ಯ ನೃತ್ಯ ಪರಂಪರೆಯನ್ನೇ ಪ್ರತಿನಿಧಿಸುವ ಡಾ॥ ಕಡೂರು ವೆಂಕಟಲಕ್ಷಮ್ಮನವರು ನಮ್ಮ ರಾಜ್ಯದ, ನಾಡಿನ ಹಿರಿಯ ನರ್ತಕಿ, ನೃತ್ಯ ಗುರು.

ಆ ವಿಶಿಷ್ಟ ಪರಂಪರೆಯ ರೂವಾರಿಯಾದ, "ನಾಟ್ಯ ಸರಸ್ವತಿ" ಎಂದೇ ಖ್ಯಾತರಾದ ಜಟ್ಟಿತಾಯಮ್ಮನವರ ಈ ಪಟ್ಟ ಶಿಷ್ಯೆ, ಏಳು ದಶಕಗಳಿಗೂ ಮೀರಿ ತಮ್ಮ ಕಲಾಸೇವೆಯನ್ನು ಸಾರ್ಥಕಪಡಿಸಿಕೊಂಡಿದ್ದಾರೆ. ತಮ್ಮ ಇಂದಿನ ಇಳಿ ವಯಸ್ಸಿನಲ್ಲಿಯೂ, ಅಭ್ಯರ್ಥಿಗಳಿಗೆ ಬೋಧನೆ ಮಾಡುತ್ತಾ, ಅವರ ನೃತ್ಯ ಬೆಳವಣಿಗೆಗೆ ಸಹಾಯಕರಾಗಿದ್ದಾರೆ.

ಮೊದಲು ತಮ್ಮ ಗುರುವಿನಂತೆ ಮೈಸೂರು ಅರಮನೆಯ ನರ್ತಕಿಯಾಗಿ, ಆಸ್ಥಾನದ ಗೌರವ, ಘನತೆಯನ್ನು ಶ್ರೀಮಂತಗೊಳಿಸಿದರು.

ಅರಮನೆ ವಾತಾವರಣದಿಂದ ಬಿಡುಗಡೆ ಹೊಂದಿದ ನಂತರ ನಾಡಿನ ಕಲಾಜೀವನದ ಹಲವಾರು ವೇದಿಕೆಗಳಲ್ಲಿ ತಮ್ಮ ಕಲಾಸೇವೆಯನ್ನು ಡಾ॥ ವೆಂಕಟಲಕ್ಷಮ್ಮ ಮುಂದುವರಿಸಿಕೊಂಡು ಬರುತ್ತಿದ್ದಾರೆ. ಹೀಗೆ ಅವರಿಂದ ಉಪಕೃತರಾದ ಸಂಸ್ಥೆಗಳಲ್ಲಿ– ಮೈಸೂರು ವಿಶ್ವವಿದ್ಯಾನಿಲಯದ ಕಲಾವಿಭಾಗ ಸೇರಿದೆ. ನೃತ್ಯ ವಿಭಾಗದ ಮುಖ್ಯಸ್ಥರಾಗಿ ಹಲವಾರು ವರ್ಷಗಳು ಸೇವೆಯನ್ನು ಈ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ್ದಾರೆ. ಆ ಅವಧಿಯಲ್ಲಿ ನೃತ್ಯಾಭ್ಯಾಸ ಮಾಡಿ, ತಮ್ಮ ಕಲಾಜೀವನವನ್ನು ಮುಂದುವರಿಸುತ್ತಿರುವ

ವೆಂಕಟಲಕ್ಷಮ್ಮನವರ ಶಿಷ್ಯೆಯರು ಅನೇಕ. ಅಂತೆಯೇ ಮೇಲಿಂದ ಮೇಲೆ ಹಲವಾರು ನೃತ್ಯ ಸಂಸ್ಥೆಗಳ ಮೂಲಕ ಹಮ್ಮಿಕೊಂಡ ಅಭಿನಯ ಕಾರ್ಯಾಗಾರಗಳಲ್ಲಿ ಪಾಲ್ಗೊಂಡು ತಮ್ಮ ಅಭಿನಯ ತಂತ್ರವನ್ನು ಚುರುಕುಗೊಳಿಸಿಕೊಂಡ ಕಲಾವಿದರೂ ಕಡಿಮೆ ಇಲ್ಲ.

ಹೀಗೆ ಈ ಪ್ರಮುಖರಿಂದ ನೃತ್ಯದಲ್ಲಿ ತರಬೇತಿ ಪಡೆದು, ಸ್ಫೂರ್ತಿಗೊಂಡು, ಆ ಕಲೆಗೆ ತಮ್ಮನ್ನು ಸಮರ್ಪಿಸಿಕೊಂಡಿರುವ ನೃತ್ಯ ಕಲಾವಿದರಲ್ಲಿ ಬೆಂಗಳೂರಿನ "ನೂಪುರ"ದ ಲಲಿತ ಶ್ರೀನಿವಾಸನ್ ಹಿರಿಯರು. "ಪದ್ಮಭೂಷಣ" ಬಿರುದಿನಿಂದ ಅಲಂಕೃತರಾದ ವೆಂಕಟಲಕ್ಷಮ್ಮನವರ ಜೀವನ ಚರಿತ್ರೆಯನ್ನು ಪರಿಚಯಿಸಲು ಅವರಿಗಿಂತ ದಕ್ಷರಾದವರು ಇರಲಾರರು. ಆ ಕರ್ತವ್ಯವನ್ನು ನಮ್ಮ ರಾಜ್ಯದ ಸಂಗೀತ ನೃತ್ಯ ಅಕಾಡೆಮಿಯ ಕರೆಗೆ ಓಗೊಟ್ಟು, ಸಾಂಗವಾಗಿ ನಿರ್ವಹಿಸಿದ ಲಲಿತಾರವರಿಗೆ, ಅಕಾಡೆಮಿಯ ಪರವಾಗಿ, ಅದರ ಪ್ರಧಾನ ಸಂಪಾದಕತ್ವವನ್ನು ವಹಿಸಿಕೊಂಡಿರುವ ನಾನು ಚಿರಋಣಿ.

ಈಗಾಗಲೇ ಶ್ರೀಮತಿಯವರು "ಕರ್ನಾಟಕ ನೃತ್ಯ ರಂಗ ಮತ್ತು ನೃತ್ಯ ಶಿಲ್ಪಗಳು" ಗ್ರಂಥವನ್ನು ಒದಗಿಸಿದ್ದಾರೆ. ಅದರಂತೆ ಪ್ರಸ್ತುತ ಪುಸ್ತಕವೂ, ಕಲಾವಿದರ, ಸಂಗೀತಾಭಿಮಾನಿಗಳ ಮನ್ನಣೆಯನ್ನು ಗಳಿಸುತ್ತದೆ ಎಂಬುದರಲ್ಲಿ ನನಗೆ ಯಾವ ಸಂದೇಹವೂ ಇಲ್ಲ.

ಎಸ್ ಎನ್ ಚಂದ್ರಶೇಖರ್

ಪ್ರಧಾನ ಸಂಪಾದಕರು,
ಅಕಾಡೆಮಿ ಪ್ರಕಟಣೆಗಳು

# ಆಶೀರ್ವಚನ

ನನ್ನ ಪ್ರಿಯ ಶಿಷ್ಯೆ ಲಲಿತ ಶ್ರೀನಿವಾಸನ್ ಈಗಾಗಲೇ ನೃತ್ಯ ಕಲೆಯಲ್ಲಿ ಪರಿಣತಿಯನ್ನು ಗಳಿಸಿ ಜನಪ್ರಿಯತೆ ಗಳಿಸಿಕೊಂಡಿದ್ದಾಳೆ.

ನನ್ನ ಬಳಿ ಸುದೀರ್ಘ ಕಾಲ ಅಭಿನಯ ಶಿಕ್ಷಣ ಪಡೆದಿರುವ ಲಲಿತ ಮೈಸೂರು ನೃತ್ಯಶೈಲಿಯ ಬಗ್ಗೆ ಸಾಕಷ್ಟು ಅಧ್ಯಯನ ನಡೆಸಿ ಆ ಶೈಲಿಯ ಪ್ರಗತಿಗೆ ಸರ್ವವಿಧವಾದ ಪ್ರಯತ್ನ ನಡೆಸುತ್ತಿದ್ದಾಳೆಂಬುದೇ ನನಗೆ ಸಂತೋಷ.

ನನ್ನ ಬಗ್ಗೆ ಪುಸ್ತಕ ಬರೆಯಲು ಆಕೆಗೆ ಗುರು ಪ್ರೇರಣೆಯೇ ಆಗಿದೆ. ಆಕೆಯ ಗುರುಭಕ್ತಿ ಅಪಾರ. ಇಂತಹ ಪುಸ್ತಕ ಬರೆಯಲು ಈ ನನ್ನ ಶಿಷ್ಯಳಲ್ಲಿ ಶಕ್ತಿ-ಸಾಮರ್ಥ್ಯ ಎಲ್ಲವೂ ಇದೆ. ಈ ಪ್ರಯತ್ನದಲ್ಲಿ ಲಲಿತಳಿಗೆ ಶುಭವಾಗಲಿ ಎಂದು ಹೃತ್ಪೂರ್ವಕವಾಗಿ ಆಶೀರ್ವದಿಸುತ್ತೇನೆ.

ಪ್ರಸ್ತುತ ಪುಸ್ತಕದ ವಿಷಯಗಳನ್ನು ಲಲಿತ ನನ್ನೊಂದಿಗೆ ವಿಚಾರ ವಿನಿಮಯ ಮಾಡಿಯೇ ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯ ಮೂಲಕ ಪ್ರಕಟಿಸುತ್ತಿರುವುದು ವೈಯುಕ್ತಿಕವಾಗಿ ನನಗೆ ಸಂತೋಷ ನೀಡಿರುವ ವಿಷಯ.

ಕೆ. ವೆಂಕಟಲಕ್ಷಮ್ಮ



ಕ್ಷೇತ್ರಜ್ಞ ಪದ : ತಿರುಗಿ ಜೂಡದೇ....

## ಲೇಖಕರ ನುಡಿ

ಇಂದು ಆಳಕ್ಕಿಳಿದಿದ್ದರೂ ಸತ್ವಯುತವಾಗಿ ಹೊಳೆಯುವ ಕಣ್ಣುಗಳು, ಹಲ್ಲಿಲ್ಲದ ಬೊಚ್ಚು ಬಾಯಿಯಾದರೂ, ಲಜ್ಜಾಪೂರ್ವಕ ಮಂದಸ್ಮಿತ, ಸುಕ್ಕುಗಟ್ಟಿದ್ದರೂ ಸುಂದರವಾದ, ಲಕ್ಷಣವಾದ ವದನಾರವಿಂದದಿಂದ ಬೆಳಗುವ 89ರ ವೃದ್ಧ ಮಹಿಳೆ ಮೇಡಂ. ಆಕೆ ಅಭಿನಯ ಮಾಡಲು ಸಿದ್ಧವಾಗುತ್ತಿದ್ದಂತೆ, ಅವರ ವಯಸ್ಸು, ಬಿಳಿಯ ತಲೆ, ಕುಗ್ಗಿದ ದೇಹದ ಚಿತ್ರ ಮಾಸಿ, ಒಬ್ಬ ನವತರುಣಿಯಂತೆ ವಿರಹೋತ್ಕಂಠಿತೆಯಾಗಿ, ವಿಪ್ರಲಂಬ ಶೃಂಗಾರದ ಅನೇಕಾನೇಕ ಅವಸ್ಥೆಗಳನ್ನು ಅನುಭವಿಸುತ್ತಾ, ತನ್ನ ಸಖಿಯಲ್ಲಿ ತನ್ನ ಮನದಳಲನ್ನು ತೋಡಿಕೊಳ್ಳುತ್ತಿರುವಂತೆಯೇ ಪ್ರೇಕ್ಷಕರ ಹೃದಯಕ್ಕೆ ಲಗ್ಗೆಯಿಟ್ಟು ಶೃಂಗಾರ ರಸದ ಹೊನಲನ್ನೇ ಹರಿಸುತ್ತಾರೆ. ಇವರೇ ನನ್ನ ಗುರು ಸಂಗೀತ ಕಲಾರತ್ನ, ಕರ್ನಾಟಕ ಕಲಾತಿಲಕ, ಪದ್ಮಭೂಷಣ ಡಾ|| ಕೆ. ವೆಂಕಟಲಕ್ಷ್ಮಮ್ಮನವರು.

ಕರ್ನಾಟಕದ ಹೆಮ್ಮೆಯ ಕಲಾವಿದೆಯಾಗಿ, ಮೈಸೂರು ಭರತನಾಟ್ಯ ಶೈಲಿಯ ಪ್ರತೀಕವಾಗಿ ಇಂದಿಗೂ ಮೆರೆಯುತ್ತಿರುವ ನೃತ್ಯಕೋವಿದೆ ಇವರು.

ನೃತ್ಯಕಲೆ ಕರ್ನಾಟಕದಲ್ಲಿ ಬಹಳ ಹಿಂದಿನಿಂದಲೂ ಪ್ರಚಾರದಲ್ಲಿತ್ತು ಎಂಬುದನ್ನು ಬಾದಾಮಿಯ ಚಾಲುಕ್ಯರ ಶಿಲ್ಪಗಳು ಪ್ರತಿಪಾದಿಸಿದರೆ, 20ನೆಯ ಶತಮಾನದಲ್ಲಿಯೂ ಮೈಸೂರು ಶೈಲಿಯ ಭರತನಾಟ್ಯ

ಮೆರೆಯುತ್ತಿತ್ತು, ಇದೆ ಎಂಬುದನ್ನು ದೃಢೀಕರಿಸಲು ಸಾಕಾರ ಸ್ವರೂಪರಾಗಿ ಇಂದಿಗೂ ಜೀವಂತ ಸಾಕ್ಷಿಯಾಗಿ ನಮ್ಮೊಡನೆ ಇರುವವರು ಗುರು, ವೆಂಕಟಲಕ್ಷಮ್ಮನವರು. ತಮಿಳುನಾಡಿನ ಭರತನಾಟ್ಯದ ಧಾಳಿಯಿಂದ ಸ್ವಲ್ಪವೂ ಕಂಗೆಡದೆ ತನ್ನ ಗುರು ನಾಟ್ಯ ಸರಸ್ವತಿ ಜಟ್ಟೀ ತಾಯಮ್ಮನವರ ಹೆಸರನ್ನು ಅಜರಾಮರಗೊಳಿಸಿರುವಂತಹ ಏಕೈಕ ವ್ಯಕ್ತಿ ಇವರು.

**ಉತ್ಪ್ರೇಕ್ಷೆ ಎನ್ನಿಸಬಹುದಾದ ಈ ಮಾತುಗಳ ಸತ್ಯವನ್ನು ಕಾಣಬೇಕಾದರೆ, ವೆಂಕಟಲಕ್ಷಮ್ಮನವರನ್ನು ಮುಖತಃ ಕಾಣಬೇಕು. ತಮ್ಮ ಇಳಿವಯಸ್ಸಿನಲ್ಲಿ ಸಹ ಅವರು ತೋರುವ ಲವಲವಿಕೆ, ಜ್ಞಾಪಕಶಕ್ತಿ, ಪಾಂಡಿತ್ಯ, ಅಭಿನಯ ಸಾಮರ್ಥ್ಯ ಅವರ ಅನುಭವಗಳ ರಸಗಾಥೆ, ಮೈಸೂರು ಶೈಲಿಯಲ್ಲಿನ ಪ್ರತ್ಯೇಕತೆ ಇವುಗಳನ್ನು ಕಂಡವರಿಗೇ ಗೊತ್ತು, ಈ ಮಾತುಗಳ ಅರ್ಥ.**

ವೈಯುಕ್ತಿಕವಾಗಿ, ಕನ್ನಡ, ಕರ್ನಾಟಕ, ಇಲ್ಲಿನ ಸಂಪ್ರದಾಯ, ಕಲೆ ಎಂದು ತಲೆಕೆಡಿಸಿಕೊಳ್ಳುತ್ತಿದ್ದ ನನಗೆ, ನನ್ನ ಜೀವನದಲ್ಲಿ, ಬಹಳ ಹುಡುಕದೆಯೇ ಸಿಕ್ಕಿದ ಸಂಜೀವಿನಿ ಈ ನನ್ನ ಗುರು. ಅವರ ವ್ಯಕ್ತಿತ್ವದ ಪ್ರಭಾವ, ಕೊನೆಯಿಲ್ಲದ ತಿಳುವಳಿಕೆ, ಅನುಭವ, ಪಾಂಡಿತ್ಯದ ಪರಿಚಯ, ನನ್ನನ್ನು ಭಾವುಕಳನ್ನಾಗಿ ಮಾಡಿದ್ದರಲ್ಲಿ ಆಶ್ಚರ್ಯವೇನಿಲ್ಲ.

ಸುಮಾರು 1975ರಲ್ಲಿ ಮೈಸೂರಿಗೆ ಹೋಗಿ ಅವರ ಪರಿಚಯ ಮಾಡಿಕೊಂಡು, ಅವರಲ್ಲಿ ಶಿಷ್ಯವೃತ್ತಿ ಆರಂಭಿಸಿದೆ. ಅಂದಿನಿಂದ ಇಂದಿನವರೆಗೆ ಅನೇಕ ಸಲ ಅವರೊಡನಾಡಿಯಾಗಿ, ಅವರ ಮಾತಿನ

ಮೋಡಿಗೆ ಸಿಲುಕಿ ಅವರ ಅಭಿನಯದ ಕಂಪನ್ನು ಆಸ್ವಾದಿಸಿದ್ದರೂ, ಮತ್ತೆ ಮತ್ತೆ ಹೊಸತಾಗಿ ಕಾಣುವ ಅಪರೂಪದ ವ್ಯಕ್ತಿ ಇವರು.

ಹಿಂದಿನ ಅನುಭವದ ಅವರ ನಿರೂಪಣೆಯಾಗಲೀ, ಅರಮನೆಯ ಆಗುಹೋಗುಗಳ ವಿವರಣೆಯಾಗಲೀ, ಕಛೇರಿಗಳ, ಕಲಾವಿದರ ವಿಷಯವಾಗಲೀ, ವೈಯುಕ್ತಿಕ ವಿಚಾರಗಳೇ ಆಗಲೀ, ಅವರ ಮಾತಿನ ಮೋಡಿಗೆ ಸಿಗದೇ ಇರುವುದು ದುಸ್ಸಾಧ್ಯ.

ಅಪ್ಪಟ ಕನ್ನಡದ ಸುಂದರ ಭಾಷೆಯನ್ನು ಅವರ ಬಾಯಲ್ಲೇ ನಾನು ಹೆಚ್ಚಾಗಿ ಕೇಳಿರುವುದು. ಗಂಟೆಗಟ್ಟಲೇ ಹರಟಿದರೂ ಬೇಸರವಾಗದು, ತೃಪ್ತಿಯಾಗದು. ಇನ್ನೂ, ಮತ್ತಿನ್ನೂ ಕೇಳಬೇಕೆಂಬ ನಿರಂತರ ಕುತೂಹಲ ಕೆರಳಿಸಬಲ್ಲರು. ಒಂದೇ ಮಾತಲ್ಲಿ ಹೇಳುವುದಾದರೆ–"She is a phenomenon I have not been able to get over until today".

ಇಂತಹ ವ್ಯಕ್ತಿ ನಮ್ಮೊಡನಿರುವುದು, ನಮ್ಮ ಕಲೆಯ ಪತಾಕೆಯನ್ನು ಎತ್ತಿ ಹಿಡಿದಿರುವುದು, ಅನೇಕ ಶಿಷ್ಯರನ್ನು ಮುಂದಿನ ಪೀಳಿಗೆಗಾಗಿ ತಯಾರಿಸಿರುವುದು, ರಾಷ್ಟ್ರದ ಅತ್ಯುನ್ನತ ಸನ್ಮಾನಗಳನ್ನು ಗಳಿಸಿರುವುದು ನಮ್ಮ ನಾಡಿನ ಅದೃಷ್ಟ, ಸೌಭಾಗ್ಯ. ಅವರ ಬಗ್ಗೆ ಈ ಬರಹವನ್ನು ಬರೆಯಲು ಸಿಕ್ಕಿರುವ ಅವಕಾಶ ನನ್ನ ಅದೃಷ್ಟ. ಅದಲ್ಲದೆ ಅವರು ನಮ್ಮ ನೂಪುರ ನೃತ್ಯಶಾಲೆಯ ಅಧ್ಯಕ್ಷರಾಗಿರುವುದು ನಮ್ಮ ಸುಯೋಗ.

ಈ ಹಿಂದಿನ ಅಕಾಡೆಮಿಯ ಅಧ್ಯಕ್ಷರಾಗಿದ್ದ ಪಂ|| ಶೇಷಾದ್ರಿ ಗವಾಯಿಯವರು ನನ್ನ ಗುರುಗಳ ಬಗ್ಗೆ ಕಿರು ಪುಸ್ತಕವನ್ನು ಬರೆಯುವಂತೆ ನನಗೆ ತಿಳಿಸಿದ್ದರು. ಮನಸ್ಸಿದ್ದರೂ ಕಾರಣಾಂತರಗಳಿಂದ ಆ ಕೆಲಸ ಬೇಗ ಸಾಗದೆ, ಹಸ್ತಪ್ರತಿ

ಪೂರ್ತಿಯಾಗುವುದರಲ್ಲಿ ಅಕಾಡೆಮಿ ಪುನರ್ರಚಿತವಾಯಿತು. ಈಗ ಹೊಸ ಅಕಾಡೆಮಿಗೆ ಅಧ್ಯಕ್ಷರಾಗಿ ನೇಮಿತರಾಗಿರುವ ಖ್ಯಾತ ನೃತ್ಯ ಗುರು ಶ್ರೀಮತಿ ಚಂದ್ರಭಾಗಾದೇವಿಯವರು, ಪಂ|| ಗವಾಯಿಯವರಂತೆಯೇ ಉತ್ಸಾಹ ತೋರಿಸಿ ಪುಸ್ತಕ ಪ್ರಕಟಣೆಗೆ ಸಜ್ಜುಗೊಳಿಸಲು ಅನುವಾಗಿದ್ದಾರೆ ಇವರಿಬ್ಬರಿಗೂ ನನ್ನ ಕೃತಜ್ಞತೆಗಳು.

ನಾನು ಮೇಡಂರವರಲ್ಲಿ ಆಗಾಗ ಮಾತನಾಡುತ್ತಾ ಹಿಂದೆಯೇ ಅನೇಕ ಮಾಹಿತಿಗಳನ್ನು ಪಡೆದಿದ್ದೆ. ಅವೆಲ್ಲವನ್ನೂ ಬರೆದು ಕಡೂರಿನ ತಂಗಲಿಗೆ ಹೋಗಿ, ಅವರಿಗೆ ಓದಿ ಹೇಳಿ ಹಲವಾರು ತಿದ್ದುಪಡಿಗಳನ್ನು ಮಾಡಿದೆ. ಅವರ ಸೂಕ್ಷ್ಮಮತಿ, ಜ್ಞಾಪಕ ಶಕ್ತಿಗೆ ಮತ್ತೆ ಬೆರಗಾದೆ! ಈ ಪುಸ್ತಕಕ್ಕಾಗಿ ಕೆಲವು ಚಿತ್ರಗಳನ್ನು ಸಹ ನನಗೆ ಕೊಟ್ಟು ಮೇಡಂ ಉಪಕರಿಸಿದ್ದಾರೆ. ನಮ್ಮ ಮನೆಯಲ್ಲಿ ಒಂದುಸಲ ಶ್ರೀ ಬಿ.ವಿ.ಕೆ. ಶಾಸ್ತ್ರಿಗಳವರು, ಮೇಡಂರವರ ಸಂದರ್ಶನ ಒಂದನ್ನು ಧ್ವನಿ ಮುದ್ರಿಸಿದ್ದರು. ನನಗೆ ಅದರ ಪ್ರತಿಯನ್ನೂ ಸಹ ಶಾಸ್ತ್ರಿಗಳು ನೀಡಿದ್ದರು. ಈ ಪ್ರತಿಯೂ ಸಹ ಪುಸ್ತಕಕ್ಕೆ ಬಹಳ ಸಹಾಯ ಮಾಡಿತು. ಇದಕ್ಕಾಗಿ ನನ್ನ ಮೇಡಂರವರಿಗೂ ಶ್ರೀ ಬಿ.ವಿ.ಕೆ. ಶಾಸ್ತ್ರಿಗಳವರಿಗೂ ನನ್ನ ನಮನಗಳು.

ಈ ಪುಸ್ತಕ ಪ್ರಕಟಣೆಯಲ್ಲಿ ನೆರವಾಗಿರುವ ಸಂಪಾದಕ ವರ್ಗದವರಿಗೂ, ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯ ಎಲ್ಲ ಸದಸ್ಯರಿಗೂ ನನ್ನ ವಂದನೆಗಳು.

ಲಲಿತ ಶ್ರೀನಿವಾಸನ್

# ಡಾ|| ಕೆ. ವೆಂಕಟಲಕ್ಷ್ಮಮ್ಮ

ಕಡೂರಿನ ತಂಗಲಿ ತಾಂಡ್ಯದಲ್ಲಿ ಮೇ 29, 1906ರಲ್ಲಿ ಬಂಜಾರ ಜಾತಿಯಲ್ಲಿ ಡಾ|| ಕೆ. ವೆಂಕಟಲಕ್ಷಮ್ಮನವರ ಜನನವಾಯಿತು.

ಗುಜರಾತಿ, ಮರಾಠಿ, ಹಿಂದಿ, ಉರ್ದು ಇವುಗಳ ಸಂಮ್ಮಿಶ್ರ ಭಾಷೆ ಈ ಜನಾಂಗದ್ದು. ಹುಟ್ಟಿದ ಮಗು ಸಣ್ಣ ವಯಸ್ಸಿಗೇ ತಂದೆಯನ್ನು ಕಳೆದುಕೊಂಡಿದ್ದರಿಂದ ಅಜ್ಜ ರಾಮನಾಯಕ ಮತ್ತು ಅಜ್ಜಿಯೇ ಈ ಮಗುವನ್ನು ಬೆಳೆಸಿದರು. ವೆಂಕಟಲಕ್ಷಮ್ಮನವರ ಬಾಲಪ್ರತಿಭೆ ಸಣ್ಣ ವಯಸ್ಸಿಗೇ ಪ್ರಕಟವಾಯಿತು. ಶಾಲೆಯ ಸಾಂಸ್ಕೃತಿಕ ಕಾರ್ಯಕ್ರಮ ಲಕ್ಷ್ಮೀ ಸರಸ್ವತೀ ಸಂವಾದದಲ್ಲಿ ಸರಸ್ವತಿಯ ಪಾತ್ರ ವಹಿಸಿದ್ದರಿವರು. ಅಂದು ಹೇಳಿದ ಸಂಸ್ಕೃತ ಶ್ಲೋಕ–ಬುದ್ಧಿಗೇ ಹೆಚ್ಚು ಪ್ರಾಶಸ್ತ್ಯವಿದೆ ಎಂದು ದೃಢೀಕರಿಸುವಂತಹದನ್ನು ಇಂದೂ ನೆನಪಿನಲ್ಲಿಟ್ಟು ಕೊಂಡು ಹೇಳುವ ಮೇಡಂರವರು, ಅಂದು ಮೊದಲನೆಯ ಬಹುಮಾನ ಗಳಿಸಿದರಲ್ಲದೆ ಅವರ ಜೀವನದ ಧ್ಯೇಯವೇ ಆ ಮಾತುಗಳಲ್ಲಿ ಅರ್ಥವಾಯಿತೆಂದು ಊಹಿಸಬಹುದು.

'ಅರ್ಥಾನಾಂ ಅರ್ಜನೇ ದುಃಖಂ ಅರ್ಜತಸ್ಯಪಿ, ರಕ್ಷಣೇ, ನಾಶೇ ದುಃಖಂ, ವ್ಯಯೇ ದುಃಖಂ, ಅರ್ಥೋ ದುಃಖಸ್ಯ ಭಾಜನಂ'

ಐಶ್ವರ್ಯ ಪಡೆಯಲು ಕಷ್ಟ ಪಡಬೇಕು. ಪಡೆದರೆ ಅದನ್ನು ಕಾಪಾಡುವ ಚಿಂತೆ. ನಾಶವಾದರೆ, ದುಃಖ, ಅದಕ್ಕೆ ಕೊನೆಯೇ ಇಲ್ಲ. ಆದರೆ ಅದೇ ತನ್ನ ಬುದ್ಧಿಶಕ್ತಿಯಾದರೆ ಯಾರೂ ನಾಶಮಾಡಲಾರರು ಎಂಬ ತತ್ವವುಳ್ಳ ಸಂವಾದವನ್ನು ಅಭಿನಯಿಸಿ, ಪುಟ್ಟ ವೆಂಕಟಲಕ್ಷಮ್ಮ ತಾವು ಒಳ್ಳೆಯ ಕಲಾವಿದೆಯಾಗಬಲ್ಲರೆಂಬ ಕುರುಹನ್ನು ತೋರಿದರು.



ಪರಿಸರ : ತಂಗಲಿ ತಾಂಡ್ಯದಲ್ಲಿ ಬಂಜಾರ ನೃತ್ಯ....

ಇದರ ಪ್ರಭಾವದಿಂದ ಹುಡುಗಿಗೆ, ತಂಗಲಿಯ ತಮ್ಮಯ್ಯಂಗಾರರಿಂದ ಅಮರಕೋಶ, ಸಂಸ್ಕೃತ ಪಾಠ, ಪಿಟೀಲು ಕಿಟ್ಟಪ್ಪನವರಿಂದ ಸಂಗೀತದ ಪಾಠ ಎಂಟನೇ ವಯಸ್ಸಿಗೇ ಆರಂಭವಾಯಿತು. ಇವರ ಪ್ರಗತಿಯನ್ನು ಕಂಡ ಊರಿನ ಅನಂತ ಜೋಯಿಸರು, ಮುಂತಾದವರು ಹುಡುಗಿಯನ್ನು ಮೈಸೂರಿಗೆ ಕರೆದುಕೊಂಡು ಹೋಗುವಂತೆ ಇವರ ಹಿರಿಯರಿಗೆ ಹೇಳಿದರು. ಮೈಸೂರಿಗೆ ಹೋದರೇನೇ ಮೊಮ್ಮಗಳಿಗೆ ಸರಿಯಾದ ವಿದ್ಯೆ ಹೇಳಿಸಲು ಸಾಧ್ಯ ಎಂದು ಮನಗಂಡ ಅಜ್ಜ, ಅಜ್ಜಿ ಪ್ರಯಾಣಕ್ಕೆ ಸಿದ್ಧರಾದರು. ಅನಂತ ಜೋಯಿಸರು ಬಿಡಾರಂ ಕೃಷ್ಣಪ್ಪನವರಿಗೆ ಒಂದು ಪತ್ರ ಬರೆದುಕೊಟ್ಟರು.

ರೈಲಿನಲ್ಲಿ ಮೈಸೂರಿಗೆ ಬಂದ ಈ ಸಂಸಾರಕ್ಕೆ, ಟಾಂಗಾವಾಲನೊಬ್ಬ ತಂಗಲು ಒಂದು ಸಣ್ಣಮನೆಯನ್ನು ತೋರಿಸಿ ಸಹಾಯ ಮಾಡಿದ. ಅಲ್ಲದೆ ತನಗೆ ತಿಳಿದಿದ್ದ ಕಾನಕಾನಹಳ್ಳಿ ಪಾಪಮ್ಮ ಎಂಬುವರಲ್ಲಿ ಕರೆದುಕೊಂಡು ಹೋದ. ಆಕೆಯಾದರೋ ಈ ಮಗುವಿಗೆ ಸರಿಯಾದ ಗುರು ತಾನಲ್ಲವೆಂದು ಅರಿತು, ಆಗ ಖ್ಯಾತಿವೆತ್ತ ಜಟ್ಟಿ ತಾಯಮ್ಮನವರಲ್ಲಿ ವಿದ್ಯೆ ಹೇಳಿಸುವಂತೆ ಪ್ರೇರೇಪಿಸಿದರು. ಆಕೆಯೇ ತಾಯಮ್ಮನವರಲ್ಲಿಗೆ ಕರೆದುಕೊಂಡು ಹೋಗಿ ಪರಿಚಯ ಮಾಡಿಕೊಟ್ಟರು.

ಹೀಗೆ ಸುಮಾರು ಒಂಬತ್ತನೇ ವಯಸ್ಸಿನಿಂದ ವೆಂಕಟಲಕ್ಷಮ್ಮ ನವರಿಗೆ ಜಟ್ಟಿ ತಾಯಮ್ಮನವರಲ್ಲಿ ಶಾಸ್ತ್ರೀಯ ಭರತನಾಟ್ಯ ಪಾಠವೂ, ಬಿಡಾರಂ ಕೃಷ್ಣಪ್ಪನವರ ಶಿಷ್ಯ ಆಸ್ಥಾನ ವಿದ್ವಾಂಸ ದೇವೇಂದ್ರಪ್ಪನವರಲ್ಲಿ ಶಾಸ್ತ್ರೀಯ ಸಂಗೀತ ಪಾಠವೂ ಆರಂಭವಾಯಿತು. ಆಗ ತಾಯಮ್ಮನವರಿಗೆ ಸುಮಾರು 50 ವರ್ಷ ವಯಸ್ಸು. ಮಗಳು ರಂಗನಾಯಕಮ್ಮ–ಪುಟ್ಟಮ್ಮಣ್ಣಿ ಸಹ ಒಳ್ಳೆಯ ಕಲಾವಿದೆಯಾಗಿದ್ದರು.



ಡಾ|| ಕೆ. ವೆಂಕಟಲಕ್ಷ್ಮಮ್ಮನವರ ಗುರು
ನಾಟ್ಯ ಸರಸ್ವತಿ ಜೆಟ್ಟಿತಾಯಮ್ಮ

## ಅಭ್ಯಾಸ ಕ್ರಮ

ಗುರು ಜಟ್ಟಿತಾಯಮ್ಮನವರ ಮನೆಗೆ ಬೆಳಗಿನ ಜಾವ ಐದು ಗಂಟೆಗೆ ಹೋಗಿ ಅಂಗಸಾಧನೆ ಮಾಡಬೇಕಿತ್ತು. ಇದನ್ನು ಕೈಕಾಲು ಸಾಧಕವೆನ್ನುತ್ತಿದ್ದರು. ಅಭ್ಯಾಸದ ಸಮಯದಲ್ಲಿ ಶರಾಯಿ ನಿಲುವಂಗಿತೊಟ್ಟು, ಸೊಂಟಕ್ಕೆ ಪಟ್ಟಿ ಕಟ್ಟಬೇಕಿತ್ತು. ಹಾರುವುದು, ಬಸ್ಕಿ ಹೊಡೆಯುವುದು, ಸೊಂಟ ತಿರುಗಿಸುವುದು, ದಂಡೆ ಒತ್ತುವುದು, ಕಾಲನ್ನು ಮೈ ಹಿಂದಿನಿಂದ ಬಳಸಿ ಬರುವುದು, ಹಿಂದೆ ವಾಲುವುದು, ಕುಪ್ಪಳಿಸುವುದು, ಮುಂತಾದುವನ್ನು ಅಭ್ಯಾಸ ಮಾಡಿಸುತ್ತಿದ್ದರು. ಹಿಂದೆ ವಾಲಿ ಕಣ್ಣುರೆಪ್ಪೆಯಿಂದ ಹಂಚಿಕಡ್ಡಿ, ನಾಣ್ಯ ತೆಗೆಯುವುದೊಂದು ಚಮತ್ಕಾರವಾಗಿತ್ತು.

ಆರು ಗಂಟೆಯಿಂದ ಏಳು ಗಂಟೆಯವರೆಗೆ ಸ್ವಲ್ಪ ಬಿಡುವು. ಲಘು ಉಪಹಾರ ಗುರುಗಳ ಮನೆಯಲ್ಲೇ. ಅಥಾದನಂತರ ಅಡುವುಗಳಿಂದ ನೃತ್ಯಾಭ್ಯಾಸ ಆರಂಭವಾಗುತ್ತಿತ್ತು. ಯಥಾಪ್ರಕಾರ ಪೂರ್ವರಂಗ, ಜತಿಸ್ವರ, ವರ್ಣ ಮುಂತಾದವುಗಳ ಪಾಠ ನಡೆಯುತ್ತಿತ್ತು. ಮಧ್ಯಾಹ್ನದ ವೇಳೆ ಕೂತು ಅಭಿನಯ ಮಾಡಲು ಕಲಿಸುತ್ತಿದ್ದರು. ಶಾಸ್ತ್ರಾಭ್ಯಾಸವೂ ಜೊತೆಯಲ್ಲೇ ನಡೆಯುತ್ತಿತ್ತು. ತಂಬೂರಿಯನ್ನು ಶೃತಿಮಾಡಿ ಅದರೊಡನೆ ಧ್ವನಿಕೂಡಿಸಿ ಶುದ್ಧವಾಗಿ ಹಾಡಬೇಕೆನ್ನುವರು. ಅರ್ಥವನ್ನು ವಿವರಿಸಿ ಹೇಳುವರು. ಶ್ಲೋಕಗಳನ್ನು ಸ್ಲೇಟಿನಲ್ಲಿ ಬರೆದು ಬಾಯಿಪಾಠ ಮಾಡಬೇಕಿತ್ತು. ಹೀಗೆ ಎಲ್ಲಾ ರೀತಿಯ ಅಭ್ಯಾಸವನ್ನೂ ದಿನದಿನವೂ ಮಾಡಬೇಕಿತ್ತು. ಈಗಿನಂತೆ ತಿಂಗಳು ತಿಂಗಳೂ ಸಂಭಾವನೆ ತೆಗೆದುಕೊಳ್ಳುತ್ತಿರಲಿಲ್ಲ. ಹಿರಿಯರಲ್ಲಿ ನಡೆದ ಒಪ್ಪಂದದಂತೆ ಕಂತುಗಳಲ್ಲಿ ಹಣ ಸಂದಾಯವಾಗುತ್ತಿತ್ತು.



ಜಾವಳಿ : ನಿನ್ನ ನಾ ಬಲ್ಲೆ.... ವೆಂಕಟಲಕ್ಷಮ್ಮ

### ಸಾಧಕ ಪೂಜೆ

ಪಾಠ ಪ್ರಥಮವಾಗಿ ಆರಂಭವಾಗುವಾಗ ಮಾಡುವ ಪೂಜೆಗೆ ಸಾಧಕಪೂಜೆ ಎನ್ನುತ್ತಿದ್ದರು. ಈ ಪೂಜೆ ಕ್ರಮವಾಗಿ ಹೀಗೆ ನಡೆಯುತ್ತಿತ್ತು. ಮೊದಲು ಗಣಪತಿ ಸರಸ್ವತಿ ಪೂಜೆಯನ್ನು ಮಾಡಿದ ಮೇಲೆ, ನೆಲದ ಮೇಲೆ ಭತ್ತವನ್ನು ಹರಡಿ, ಅದರ ಮೇಲೆ ಒಂದು ಜೊತೆ ಬಿಳಿಯ ಹೊಸ ಬಟ್ಟೆಯನ್ನು ಹಾಸುತ್ತಿದ್ದರು. ಭತ್ತದ ಮೇಲೆ ಸ್ವಸ್ತಿಕ ಚಿನ್ಹೆಯನ್ನು ಬರೆಯಲಾಗುತ್ತಿತ್ತು. ಗುರುಗಳ ಕೈಹಿಡಿದು ಶಿಷ್ಯೆ ಈ ಬಟ್ಟೆಯ ಮೇಲೆ ಮೊದಲು ಬಲಗಾಲಿನಿಂದ ಉಪಕ್ರಮಿಸಿ ಐದು ಹೆಜ್ಜೆ ಹಾಕುವಳು. ಗುರುವಿಗೆ ವಂದಿಸಿ ಕಾಣಿಕೆಯಿತ್ತು, ಸಾಧಕ ಪೂಜೆಯಿಂದ ಮುಂದಿನ ಪಾಠಕ್ಕೆ ಶಿಷ್ಯೆ ತೊಡಗುವಳು.

### ವದ್ದಿಗೆ ಪೂಜೆ

ಶಿಷ್ಯೆ ಹೆಚ್ಚು ಕಡಿಮೆ ರಂಗಪೂಜೆಗೆ ತಯಾರಾಗುತ್ತಿದ್ದಾಳೆ ಎನಿಸಿದಾಗ, ವದ್ದಿಗೆ ಪೂಜೆ ಮಾಡಿಸುವರು. ವಾದ್ಯದವರನ್ನೆಲ್ಲಾ ಕರೆದು, ಕಾಣಿಕೆಯಿತ್ತು, ವಾದ್ಯಗಳಿಗೆ ಪೂಜೆ ಮಾಡಿ ನಮಿಸಿ, ಅದರೊಡನೆ ಅಭ್ಯಾಸಕ್ಕೆ ತೊಡಗುವುದೇ ವದ್ದಿಗೆಪೂಜೆ. ಅಭ್ಯಾಸ ಸಮಯದಲ್ಲಿ ಕಾಲಿಗೆ ಗೆಜ್ಜೆಕಟ್ಟಲು ಪ್ರಾರಂಭಿಸುವರು.

### ಗೆಜ್ಜೆಪೂಜೆ

ವೆಂಕಟಲಕ್ಷ್ಮಮ್ಮನವರ 12ನೇ ವಯಸ್ಸಿನಲ್ಲಿ ಗೆಜ್ಜೆಪೂಜೆ ಅಥವಾ ರಂಗಪೂಜೆ ಕಾರ್ಯಕ್ರಮವನ್ನು ಏರ್ಪಡಿಸಿದ್ದರು. ಅದು ಈಗಿನಂತೆ ಸಾಯಂಕಾಲದ ಒಂದು ಸಾರ್ವಜನಿಕ ಕಾರ್ಯಕ್ರಮ ವಾಗಿರುತ್ತಿರಲಿಲ್ಲ. ಒಂದು ಒಳ್ಳೆಯ ದಿನವನ್ನು ನಿಗದಿಪಡಿಸಿ ಗುರುವಿನ ಮನೆಯಲ್ಲೋ ಅಥವಾ ಛತ್ರ ಒಂದರಲ್ಲೋ ಬೆಳಗಿನ ವೇಳೆ ನಡೆಸುತ್ತಿದ್ದ ಸಮಾರಂಭವದು. ಈ ವೇಳೆಗಾಗಲೇ ವೆಂಕಟಲಕ್ಷ್ಮಮ್ಮನವರ ಸಂಸಾರ ಗುರುವಿನ ಮನೆಯ ಹತ್ತಿರವಿದ್ದ



ವರ್ಣ : ಮ್ರೊಕ್ಕೇನು ಚೂಡರಾ....

ಬೇರೊಂದು ಮನೆಗೆ ವರ್ಗಾವಣೆಯಾಗಿತ್ತು. ಮೇಡಂರವರು ಮಿಷನ್ ಹೈಸ್ಕೂಲಿನಲ್ಲಿ 8ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ್ದರು. ಅವರ ರಂಗಪೂಜೆಗಾಗಿ ಗುರುಗಳ ಮನೆಯ ಬಳಿಯಿದ್ದ ದಿವಾನಖಾನೆಯೊಂದ್ನು ಗೊತ್ತುಪಡಿಸಲಾಗಿತ್ತು. ಅಕ್ಷತೆಯಿತ್ತು ಸಂಸ್ಕೃತ ಪಂಡಿತರನ್ನೂ, ಕಲಾವಿದರನೇಕರನ್ನೂ ಆಹ್ವಾನಿಸಲಾಗಿತ್ತು.

ಬೆಳಿಗ್ಗೆ ಮಂಗಳ ಸ್ನಾನಮಾಡಿ 18 ಮೊಳದ ಭಾರೀ ಸೀರೆಯನ್ನು ಕಿನಕಾಪಿನಶರಾಯಿಯ ಮೇಲೆ ಕಚ್ಚೆ ಹಾಕಿ ಉಡಿಸಲಾಗಿತ್ತು. ನಾಟ್ಯಕ್ಕೆ ಒಪ್ಪುವ ಒಡವೆಗಳನ್ನು ಹಾಕಿ ಅಲಂಕರಿಸಲಾಗಿತ್ತು. ಸುಮುಹೂರ್ತದಲ್ಲಿ ದಾರದಲ್ಲಿ ಕಟ್ಟಿದ ಹೊಸ ಗೆಜ್ಜೆಯನ್ನು ತಟ್ಟೆಯಲ್ಲಿಟ್ಟು ಅದನ್ನು ನರ್ತಕಿ ಹಿಡಿದು ಪುಷ್ಪಾಂಜಲಿ ಶ್ಲೋಕ, ಕಾಳಿದಾಸನ ಮಾಳವಿಕಾಗ್ನಿ ಮಿತ್ರದ ನಾಟ್ಯ ಪ್ರಶಂಸಾಶ್ಲೋಕ ಮತ್ತು ಚೂರ್ಣಿಕೆಯನ್ನು ಹಾಡಿದ ನಂತರ, ನೆರದಿರುವ ಹಿರಿಯರಿಂದ ಮುಟ್ಟಿಸಿ, ಗುರುವೇ ಶಿಷ್ಯೆಯ ಬಲಗಾಲಿಗೆ ಮೊದಲು ನಂತರ ಎಡಗಾಲಿಗೆ, ದಾರದಲ್ಲಿ ಕಟ್ಟಿದ ಗೆಜ್ಜೆಗಳನ್ನು ಕಟ್ಟುತ್ತಿದ್ದರು. ಆದಾದನಂತರ ವಾದ್ಯಗಳ ಪೂಜೆ ನಡೆಯುತ್ತಿತ್ತು.

ಮೈಸೂರು ಪದ್ಧತಿಯ ಭರತನಾಟ್ಯ ಕಾರ್ಯಕ್ರಮದಲ್ಲಿ ಅಲರಿಪು ಮಾಡುತ್ತಿರಲಿಲ್ಲ. ಪೂರ್ವರಂಗ ವಿಧಿಯಿಂದಲೇ ನೃತ್ಯಕಾರ್ಯಕ್ರಮ ಆರಂಭವಾಗುತ್ತಿತ್ತು. ತಾಳಗೆಜ್ಜೆಯನ್ನು ಒಂದು ತಟ್ಟೆಯಲ್ಲಿಟ್ಟು ಕೈಯಲ್ಲಿ ಹಿಡಿದ ನರ್ತಕಿ ತಾನೇ 'ಆದ್ಯ ಶ್ರೀ ಶಶಿಖಂಡ' ಎಂಬ ನಾಟರಾಗದ ಪುಷ್ಪಾಂಜಲಿ ಶ್ಲೋಕವನ್ನು ಹಾಡಬೇಕಿತ್ತು. ನಂತರ ಜಟ್ಟಿತಾಯಮ್ಮನವರಿಗೆ ಪ್ರಿಯವಾದ ಕಾಳಿದಾಸನ ಮಾಳವಿಕಾಗ್ನಿಮಿತ್ರದ, ನಾಟ್ಯ ಪ್ರಶಂಸಾ ಶ್ಲೋಕ 'ದೇವಾನಾಂ ಇದಂ' ಎಂಬುದನ್ನು ಕಲ್ಯಾಣಿರಾಗದಲ್ಲಿ ಹಾಡಿ, 'ಶ್ರೀಮದ್ ಅಖಂಡ' ಎಂಬ ಆರಭಿರಾಗದ ಚೂರ್ಣಿಕೆಯನ್ನು ಅಂದು ವೆಂಕಟಲಕ್ಷ್ಮಮ್ಮನವರು ಹಾಡಿದುದಾಗಿ ಜ್ಞಾಪಿಸಿಕೊಳ್ಳುತ್ತಾರೆ.



ಮೈಸೂರು ಅರಮನೆಯಲ್ಲಿ ಕೆ. ವೆಂಕಟಲಕ್ಷ್ಮಮ್ಮ ಮತ್ತು ಸುಂದರಮ್ಮನವರ ಜೋಡಿ ನೃತ್ಯಪ್ರದರ್ಶನ

ಕಾಲಿಗೆ ಗೆಜ್ಜೆಕಟ್ಟಿದ ನಂತರ ಹಲವಾರು ಜತಿಗಳನ್ನು ನರ್ತಿಸಿ ಗಣಪತಿಯನ್ನು ಕುರಿತ ನೃತ್ಯ ಮಾಡುತ್ತಿದ್ದರು. ನಂತರ ಯಥಾವತ್ತಾಗಿ ಜತಿಸ್ವರ, ಶಬ್ದ, ವರ್ಣಗಳ ನೃತ್ಯ ಜರುಗುತ್ತಿತ್ತು. ಶ್ಲೋಕ, ಅಷ್ಟಪದಿ, ಪದ, ಜಾವಳಿಗಳ ನಂತರ ತಿಲ್ಲಾನದೊಂದಿಗೆ ಕಾರ್ಯಕ್ರಮ ಮುಕ್ತಾಯವಾಗುತ್ತಿತ್ತು. ಹೀಗೆ ಒಂದೂವರೆಯಿಂದ ಎರಡು ಗಂಟೆಗಳ ಕಾರ್ಯಕ್ರಮ ನಡೆಯುತ್ತಿತ್ತು. ಕೊನೆಗೆ ಮಂಗಳ ಹಾಡಿ, ಗುರುಗಳಿಗೆ ನಮಸ್ಕಾರಮಾಡಿ ಗುರು ಕಾಣಿಕೆಯಾಗಿ ಸೀರೆ, ಹಣ, ತಾಂಬೂಲ ಸಲ್ಲಿಸುತ್ತಿದ್ದರು. ಗುರುಗಳ ಪಾದಪೂಜೆ ಮಾಡುತ್ತಿದ್ದರು.

ಅದಾದ ನಂತರ ರಾಜ ತಾಂಬೂಲ, ಮಠದ ತಾಂಬೂಲ ಸಲ್ಲಿಸಿ, ನೆರೆದಿರುವ ವಿದ್ವಾಂಸರಿಗೆ, ಮುತ್ತೈದೆಯರಿಗೆ ತಾಂಬೂಲ ಕೊಟ್ಟು ನಮಿಸಿದರೆ, ಸಮಾರಂಭಕ್ಕೆ ಕೊನೆ.

ತಮ್ಮ 12ನೇ ವಯಸ್ಸಿನಲ್ಲಿ ನಡೆದ ಗೆಜ್ಜೆಪೂಜೆಯ ಸಮಾರಂಭ ಮೇಡಂರವರ ಮನದಲ್ಲಿ ಇನ್ನೂ ಹಸಿರಾಗಿ ಉಳಿದಿದೆ. ಮಂಗಳ ಸ್ನಾತಳಾಗಿ ಕಿನಕಾಪಿನ ಶರಾಯಿ, ಒಳ್ಳೆಯ ಕಲಾಬತ್ತಿನ ಹದಿನೆಂಟು ಮೊಳದ ಸೀರೆಯನ್ನು ಕಾಸಿ ಹಾಕಿ ಉಟ್ಟು, ಅಪ್ಪಟ ಚಿನ್ನದ ಒಡವೆಗಳನ್ನು ಧರಿಸಿದ್ದನ್ನು ನೆನೆಸುತ್ತಾರೆ. ಜಡೆಗೆ ರಾಗಟೆ, ಕುಚ್ಚು, ಜಡೆಬಿಲ್ಲೆ, ತಲೆಗೆ ತಲೆಬೊಟ್ಟು, ಸೂರ್ಯ, ಚಂದ್ರ ಧರಿಸಿ, ನಾಗಮುರಿ, ವಂಕಿ, ಡಾಬು, ಹಾಕಿಕೊಂಡು, ಹೂ ಮುಡಿದಿದ್ದೆ ಎನ್ನುತ್ತಾರೆ. ಮೇಕಪ್ ಸಮಾಚಾರವೇ ತಿಳಿದಿರಲಿಲ್ಲ, ಕೆನ್ನೆಗೆ ಅರಿಶಿನ ಬಳಿದು ಕೆಂಪು ಬೊಟ್ಟು ಹಣೆಗೆ ಇಟ್ಟಿದಷ್ಟೇ ಎಂದು ನಗುತ್ತಾರೆ ಅವರು.

ಸರಸ್ವತಿ, ಗಣಪತಿ, ನಟರಾಜ ದೇವರ ಚಿತ್ರಗಳಿಗೆ ಪೂಜೆಮಾಡಿ, ವಾದ್ಯಗಳಿಗೆ ಪೂಜೆಮಾಡಿ ನಂತರ ಕಛೇರಿ ಆರಂಭಿಸಿದರು. ಗುರು ತಾಯಮ್ಮನವರೂ ವಾದ್ಯದವರೂ ಹಿಂದೆ



ಮೈಸೂರುರಾಜ್ಯ ಸಂಗೀತ ನಾಟಕ ಅಕಾಡೆಮಿ ಏರ್ಪಡಿಸಿದ್ದ(೧೯೬೪) ಸಮ್ಮೇಳನದ ಸ್ಮರಣೀಯ ಛಾಯಾಚಿತ್ರ

ನಿಂತಿದ್ದರು. ತಂಬೂರಿ, ಪಿಟೀಲು, ಮದ್ದಳೆಗಳನ್ನು ನೃತ್ಯಕ್ಕೆ ಉಪಯೋಗಿಸಿದರು.

ಪೂರ್ವರಂಗ ವಿಧಿಯಾದ ಮೇಲೆ, ಅಠಾಣಾರಾಗದ ಒಂದು ಜತಿಸ್ವರ, ಯದುಕುಲ ಕಾಂಬೋಧಿಯ ಸ್ವರಜತಿ 'ಸರೋಜಾಕ್ಷಿ' ಎಂಬುದನ್ನು ಮಾಡಿದೆ ಎಂದು ಜ್ಞಾಪಿಸಿಕೊಳ್ಳುತ್ತಾರೆ. ಈ ಸ್ವರಜತಿಯ ಮೊದಲನೆಯ ಎತ್ತುಗಡೆ ಸ್ವರಕ್ಕೆ ಹಲವಾರು ಜಾತಿಗಳಲ್ಲಿ ನೃತ್ತವನ್ನು ಅಳವಡಿಸಲಾಗಿತ್ತು ಎಂದು ಹೇಳುತ್ತಾರೆ. ಮುಂದೆ ತೋಡಿ ರಾಗದಲ್ಲಿ 'ಮಾತಃ ಕಿಂ ಯದುನಾಥ' ಎಂಬ ಕೃಷ್ಣ ಕರ್ಣಾಮೃತ ಶ್ಲೋಕ, 'ಬೊಟ್ಟು ಗಟ್ಟಿನ' ಎಂಬ ಭೈರವಿ, ಛಾಪುತಾಳದ ಕ್ಷೇತ್ರಜ್ಞನ ಪದ, ಕಾನಡ ರಾಗದ ಕನ್ನಡ ಜಾವಳಿ–'ಬಾರೋ ಪ್ರಿಯನೇ', ಬೇಹಾಗ್ ರಾಗದ 'ಇಂದು ನೆನೆಚ್ಚಿಂದಿ ಇಂದುಮುಖಿ ನಾಸಾಮಿ' ಎಂಬ ತೆಲುಗು ಜಾವಳಿ, ಮತ್ತು ಕಾಪಿ ರಾಗದ ತಿಲ್ಲಾನ ನಿರ್ವಹಿಸಿದೆ ಎಂದು ನೆನ್ನೆ ನಡೆದ ಕಾರ್ಯಕ್ರಮದಂತೆ ವಿವರವಾಗಿ ತಿಳಿಸುತ್ತಾರೆ ಮೇಡಂ.

ಮೇಡಂರವರ ರಂಗಪ್ರವೇಶಕ್ಕೆ, ಮೂಗೂರು ಪುಟ್ಟಮ್ಮಣ್ಣಿ, ನೀಲ, ಕಮಲ, ಶಿವರಾಂಪೇಟೆ ಸೀತಮ್ಮ, ಜಯಲಕ್ಷ್ಮಮ್ಮ ಎಂಬ ನೃತ್ಯ ಕಲಾವಿದೆಯರೂ, ಸಂಗೀತ ವಿದ್ವಾಂಸರಾದ ಬಿಡಾರಂ ಕೃಷ್ಣಪ್ಪ, ವೆಂಕಟಗಿರಿಯಪ್ಪ, ಚಿಕ್ಕರಾಮರಾಯರು, ದೇವೋತ್ತಮ ಜೋಯಿಸರು, ಗುಂಡಾ ಜೋಯಿಸರು ಮುಂತಾದವರು ಬಂದಿದ್ದರು ಎಂದು ಜ್ಞಾಪಿಸಿಕೊಳ್ಳುತ್ತಾರೆ.

## ಸಾಹಿತ್ಯ ದರ್ಶನ

ಮೈಸೂರಿಗೆ ಬಂದಮೇಲೆ ವೆಂಕಟಲಕ್ಷಮ್ಮನವರಿಗೆ ಸಂಸ್ಕೃತ ವನ್ನು ಆಸ್ಥಾನ ವಿದ್ವಾನ್ ದೇವೋತ್ತಮ ಜೋಯಿಸರೂ, ಮತ್ತಿತರ ಸಾಹಿತ್ಯವನ್ನು ಗುರು ಶಾಂತಶಾಸ್ತ್ರಿಗಳೂ, ಕಂದಪದ್ಯ, ರಾಜಶೇಖರ ವಿಳಾಸ ಮುಂತಾದುವನ್ನು ಗಿರಿಭಟ್ಟರ ತಮ್ಮಯ್ಯನವರೂ ಅಭ್ಯಾಸ ಮಾಡಿಸಿದರು. ನೃತ್ಯ ಕಛೇರಿಗಳೇ ಅಲ್ಲದೆ, ಸಂಗೀತ



ಅಭಿನಯ ಗೋಷ್ಠಿಯೊಂದರಲ್ಲಿ... ಡಾ|| ಕೆ. ವೆಂಕಟಲಕ್ಷ್ಮಮ್ಮ

ಕಛೇರಿಗಳನೇಕವನ್ನು ಮಾಡಿದ ಸಂದರ್ಭಗಳನ್ನು ಮೇಡಂರವರು ಜ್ಞಾಪಿಸಿಕೊಳ್ಳುತ್ತಿರುತ್ತಾರೆ. ಅಂದರೆ ಆ ಕಾಲದಲ್ಲಿ ಸಂಸ್ಕೃತ, ಕನ್ನಡ, ಸಂಗೀತ ಇವು ಎಲ್ಲದರ ಪೂರ್ಣಜ್ಞಾನ ನರ್ತಕಿಗೆ ಎಷ್ಟು ಆವಶ್ಯಕವಾಗಿತ್ತು ಎಂಬ ಅಭಿಪ್ರಾಯ ತಿಳಿಯುತ್ತದೆ. ಅದು ಇಂದಿಗೂ ಅಷ್ಟೇ ಆವಶ್ಯಕ ಎಂದು ಮೇಡಂರವರು ಒತ್ತಿ ಒತ್ತಿ ಹೇಳುತ್ತಲೇ ಇರುತ್ತಾರೆ. ಈಗಿನ ರೀತಿಯ ಪಾಠಕ್ರಮ, ರಂಗಪ್ರವೇಶ ಇವುಗಳ ಬಗ್ಗೆ ಅವರಿಗೆ ಅನೇಕ ಭಿನ್ನಾಭಿಪ್ರಾಯಗಳಿವೆ, ಅದರ ರೀತಿಗೆ ಅವರ ಮನ ಸಮ್ಮತಿಸದಿರುವುದನ್ನು ಕಾಣುತ್ತೇವೆ. ವಿದ್ಯೆಗೆ ಬೇಕಾದ ವಿಶಿಷ್ಟ ಮರ್ಯಾದೆಯಲ್ಲದೆ, ಏಕೆ ಈ ಆಡಂಬರ? ಎಂದು ಹಲವಾರು ಸಲ ನೊಂದು ಹೇಳುವುದನ್ನು ನಾನು ಕೇಳಿದ್ದೇನೆ.

## ಗುರು ಜಟ್ಟಿತಾಯಮ್ಮನವರೊಂದಿಗೆ

ಗುರುಗಳಾದ ಜಟ್ಟಿತಾಯಮ್ಮನವರು, ವೆಂಕಟಲಕ್ಷ್ಮಮ್ಮನವರ ರಂಗ ಪ್ರವೇಶವಾದನಂತರ, ತಮ್ಮೊಡನೆ ಆಕೆಯನ್ನು ಕಛೇರಿಗಳಿಗೆ ಕರೆದೊಯ್ಯುತ್ತಿದ್ದರು. ಕಛೇರಿಯ ಮೊದಲ ಭಾಗವಾದ ಪೂರ್ವರಂಗ, ಜತಿಸ್ವರ, ವರ್ಣಗಳನ್ನು ಇಂತಹ ಶಿಷ್ಯೆಯರ ಕೈಲಿ ತಮ್ಮ ನಟುವಾಂಗದೊಡನೆ ಮಾಡಿಸಿ, ನಂತರ ತಾವೇ ಶ್ಲೋಕ, ಅಷ್ಟಪದಿ, ಪದ, ಜಾವಳಿಗಳ ಅಭಿನಯ ಮಾಡುತ್ತಿದ್ದರು. ಮದುವೆಮನೆ, ನಾಮಕರಣ, ಮುಂತಾದ ಶುಭಕಾರ್ಯಗಳಲ್ಲಿ ನರ್ತಿಸುವಂತೆ ಮನೆಯವರಿಂದ ತಾಂಬೂಲ ಸಹಿತವಾಗಿ ಆಹ್ವಾನ ಬರುತ್ತಿತ್ತು.

ತಾಯಮ್ಮನವರು ಶಿಷ್ಯೆಯರ ಸಹಿತ, ಅಲಂಕರಿಸಿದ ಎತ್ತಿನಗಾಡಿಯಲ್ಲಿ ಮದುವೆಗೆ ಎರಡುದಿನ ಮುಂಚಿತವಾಗಿಯೇ ಹೋಗುತ್ತಿದ್ದರು. ಆ ಕುಟುಂಬದವರಾದರೋ ಇವರನ್ನು ಪ್ರಿಯ ಬಂಧುಗಳಂತೆ ನಡೆಸಿಕೊಂಡು, ಅವರಿಗೇ ಪ್ರತ್ಯೇಕ ಬಿಡಾರವನ್ನು



ಅಷ್ಟಪದಿ : ವನಮಾಲಿ ರಾಧೇ....

ಸಜ್ಜುಗೊಳಿಸುತ್ತಿದ್ದರು. ಅವರವರ ಆರ್ಥಿಕ ಸ್ಥಿತಿಗೆ ತಕ್ಕಂತೆ ಥೈಲಿ ಹಣದ ಸಂಭಾವನೆ ಕೊಡುತ್ತಿದ್ದರು. ತಿಂಡಿ, ತಾಂಬೂಲ ಸೀರೆಗಳ ಉಡುಗೊರೆಯೂ ಸಿಗುತ್ತಿತ್ತು,

ತಾಯಮ್ಮನವರು ತಾವು ನರ್ತಿಸುವಾಗ ಶಿಷ್ಯೆಯ ಕೈಲಿ ತಾಳ ಹಿಡಿಸಿ ಹಾಕು ಎಂದು ಧೈರ್ಯ ಹೇಳುತ್ತಿದ್ದರು. ಮೈಸೂರೇ ಅಲ್ಲದೆ ಪಿರಿಯಾಪಟ್ಟಣ, ಹುಣಸೂರು, ರುದ್ರಪಟ್ಟಣಗಳಿಗೆ ಅನೇಕ ಸಲ ಗುರುಶಿಷ್ಯರು ಪ್ರಯಾಣ ಬೆಳೆಸಿ ಕಛೇರಿ ಮಾಡುತ್ತಿದ್ದರು.

ರಾವಂದೂರು ಬಸವರಾಜಪ್ಪ ಎಂಬ ರುದ್ರಪಟ್ಟಣದ ಸಾಹುಕಾರರು ಬಹಳ ತಿಳಿವಳಿಕಸ್ಥರು. ಅವರು ಬಯಸಿ ಇಂತಹುದೇ ಶ್ಲೋಕ, ಜಾವಳಿ ಮಾಡು ಎನ್ನುತ್ತಿದ್ದರು. ಅನುಭವಾಮೃತದ ಪದ್ಯಗಳನ್ನು ಅಭಿನಯಿಸು ಎನ್ನುತ್ತಿದ್ದರು. ಮುದ್ರೆ, ಭಾವ ವ್ಯತ್ಯಾಸವಾದರೆ, ಅದೇಕೆ ಹಾಗೆ ಮಾಡಿದೆ ಎನ್ನುವರು. ಚೆನ್ನಾಗಿದ್ದರೆ, ಮತ್ತೆ ಮಾಡೆನ್ನುತ್ತಿದ್ದರು. ಹೀಗೆ ವಿದ್ವಾಂಸರ, ಪರಿಣತರ ಮುಂದೆ ಅನೇಕ ಕಛೇರಿಗಳು ಸವಾಲಾಗುತ್ತಿದ್ದವು. ಸ್ಥಳದಲ್ಲೇ ಕವಿತೆ, ಶ್ಲೋಕ, ಜಾವಳಿ ಮಾಡಿ, ರಾಗ ಹಾಕಿ ಹಾಡಿ, ನರ್ತಿಸೆನ್ನುತ್ತಿದ್ದವರೂ ಇದ್ದರು.

## ಮಹಾಪೂರ

ಮದುವೆಗಳಲ್ಲಿ, ಧಾರೆಯ ಸಮಯದಲ್ಲಿ ಶಾಸ್ತ್ರಕ್ಕಾಗಿ ಒಂದರ್ಧ ಗಂಟೆ ನರ್ತಿಸುತ್ತಿದ್ದರು. ನಂತರ ರಾತ್ರಿ ಹತ್ತು ಗಂಟೆಯ ಮೇಲೆ ಪೂರ್ಣಪ್ರಮಾಣದ ಕಛೇರಿ ಜರುಗುತ್ತಿತ್ತು. ಆಗ ಮುಯ್ಯಿಗೆ ಕೂರಿಸುವ ಪದ್ಧತಿ ಇತ್ತು. ಅಂದರೆ ನವವಧೂವರರನ್ನು ಒಂದೆಡೆ ಆರತಕ್ಷತೆಗೆ ಕೂಡಿಸಿ ಅವರ ಮುಂದೆ ಒಂದು ತಟ್ಟೆ ಇಡುವರು. ನೃತ್ಯಕಲಾವಿದರಿಗಾಗಿ ಬೇರೆಡೆ ಇನ್ನೊಂದು ತಟ್ಟೆ ಇಡುವರು. ಬಂದವರು ಯಥೋಚಿತವಾಗಿ ಎರಡು ತಟ್ಟೆಗೂ ಹಣ ಹಾಕುವರು.

ನೃತ್ಯಕ್ಕಾಗಿ ಸಂದ ಹಣವನ್ನು ಕಲಾವಿದರಿಗೇ ಕೊಡುತ್ತಿದ್ದರು. ನೃತ್ಯ ನೋಡಿ ಸಂತುಷ್ಟರಾದ ಸಾಹುಕಾರರನೇಕರು ಥೈಲಿಗಟ್ಟಲೆ

ಬೆಳ್ಳಿಯ ನಾಣ್ಯವನ್ನು ತಟ್ಟೆಗೆ ಹಾಕಿದ ದಿನಗಳೆಷ್ಟೋ ಇರುತ್ತಿದ್ದವು. ರಾತ್ರಿಯ ಈ ಕಛೇರಿಯಲ್ಲಿ ಶೃಂಗಾರ ಪದಗಳ, ಅಮರುಶತಕ ಶ್ಲೋಕಗಳ, ಜಾವಳಿ ಅಷ್ಟಪದಿಗಳ ಮಹಾಪೂರವೇ ಹರಿಯುತ್ತಿತ್ತು. ಮೊದಮೊದಲು ಪುಂಗಿ, ಪಿಟೀಲು, ಮದ್ದಳೆ, ನಂತರ ಹಾರ್ಮೋನಿಯಂ, ಮುಖ ವೀಣೆಗಳನ್ನು ಹಿನ್ನೆಲೆ ಸಂಗೀತಕ್ಕಾಗಿ ಬಳಸುತ್ತಿದ್ದರು. ತಾಯಮ್ಮನವರು ಹಿಂದೂಸ್ತಾನಿ ಗಜಲ್, ಠುಮ್ರಿಗಳನ್ನು ಸಹ ಅಭಿನಯಿಸುತ್ತಿದ್ದರು. ಅದಕ್ಕೆ ಸಾರಂಗಿಯ ಸಂಗೀತವಿರುತ್ತಿತ್ತು. ತರಾನವನ್ನು ಕೂಡಾ ನರ್ತಿಸುತ್ತಿದ್ದರು.

**ನಾಟ್ಯ ಸರಸ್ವತೀ ಜಟ್ಟೀ ತಾಯಮ್ಮನವರಲ್ಲಿ ಸಂಪ್ರದಾಯಬದ್ಧ ಭರತನಾಟ್ಯವನ್ನು ಅಭ್ಯಾಸಿಸಿದ ವೆಂಕಟಲಕ್ಷ್ಮಮ್ಮನವರಿಗೆ, ಅವರಿಗೆ ಪ್ರಿಯವಾದ, ರಚನೆಗಳಾವುವು ಎಂದು ಕೇಳಿದಾಗ ಈ ಕೆಲವನ್ನು ಹೆಸರಿಸುತ್ತಾರೆ. ಎಷ್ಟೋ ಪದ ಅಷ್ಟಪದಿ, ಶ್ಲೋಕ ಜಾವಳಿಗಳನ್ನು ಕಲಿತೆ. ಅವುಗಳಲ್ಲಿ ಕ್ಷೇತ್ರಜ್ಞ ಪದ "ಚಲನಾಯನಾ ಮನಸು", ಗೀತ ಗೋವಿಂದಯಾಹಿ ಮಾಧವ,' ಅಮರು ಶತಕಯಾತಾಃ ಮತ್ತು ಕಥಮಪಿ ಸಖೀ, ಮರಚಿತಿವೋ' ಎಂಬ ತೆಲುಗು ಜಾವಳಿ, 'ಮಾತನಾಡೋ ಮೋಹನಾಂಗನೇ' ಎಂಬ ಕನ್ನಡ ಜಾವಳಿ, ನನಗೆ ಬಹಳ ಹಿಡಿಸಿದ ನೃತ್ಯಗಳು. ಎಲ್ಲೆಡೆಯೂ ಇವುಗಳನ್ನು ನರ್ತಿಸುತ್ತಿದ್ದೆ ಎನ್ನುತ್ತಾರೆ.**

ಅವರ ನೃತ್ಯ ಜೀವನದ ವಿಶೇಷ ಸಂದರ್ಭಗಳನ್ನು ನೆನೆಸುತ್ತಾ, ರಾಮೋತ್ಸವದಲ್ಲಿ ವಾಸುದೇವಾಚಾರ್ಯರ ಅಧ್ಯಕ್ಷತೆಯಲ್ಲಿ ಮೂರು ಗಂಟೆಗಳ ಕಾಲ ಹಾಡಿದುದನ್ನೂ, ಮುತ್ತಯ್ಯ ಭಾಗವತರ ಮನೆಯಲ್ಲಿ ಒಂದು ಗಂಟೆ ನರ್ತಿಸಿದುದನ್ನೂ ಮೇಡಂರವರು ಹೇಳುತ್ತಾ, ಮುತ್ತಯ್ಯ ಭಾಗವತರು, ತಾವೇ ಒಂದು ಜಾವಳಿ ಮಾಡಿ ತೋರಿಸಿ ತಮಾಷೆ ಮಾಡಿದ್ದನ್ನು ಜ್ಞಾಪಿಸಿಕೊಳ್ಳುತ್ತಾರೆ.

ವೀಣೆ ಭಕ್ಷಿಸುಬ್ಬಣ್ಣನವರ ಮನೆಯಲ್ಲಿ ಕೃಷ್ಣೋತ್ಸವದಲ್ಲಿ ನರ್ತಿಸಿದುದು ಮತ್ತೊಂದು ಸಂದರ್ಭ. ತಾಯಮ್ಮನವರ ಶಿಷ್ಯೆಯರಾದ ಪುಟ್ಟವೆಂಕಟಮ್ಮ, ನಾಗರತ್ನ ಮತ್ತು ವೆಂಕಟಲಕ್ಷಮ್ಮನವರು ಕಾರ್ಯಕ್ರಮ ನಡೆಸಲು ಅವಕಾಶ ದೊರೆತಿತ್ತು. ವೆಂಕಟಲಕ್ಷಮ್ಮನವರು ಮಾಡಿದ 'ಮರಚತಿವೋ ನಾ ಸಾಮಿ' ಎಂಬ ಜಾವಳಿಯನ್ನು ನೋಡಿ ಅತೀವ ಸಂತಸಪಟ್ಟ ಸುಬ್ಬಣ್ಣನವರು 'ತಾಯಮ್ಮ ನಿನಗೆ ಈಕೆ ತಕ್ಕ ಶಿಷ್ಯೆ' ಎಂದು ಕೊಂಡಾಡಿದ್ದರು. 'ನಿನ್ನ ಅಂಶ ಅವಳಲ್ಲಿ ಸಂಪೂರ್ಣವಾಗಿದೆ.' ನೀನು ಮನಸ್ಸು ಬಿಟ್ಟು ಪಾಠ ಮಾಡೆಂದು ಹೇಳಿ, ವೆಂಕಟಲಕ್ಷಮ್ಮನವರ ತಲೆ ನೇವರಿಸಿ, ವಿನಯದಿಂದ ಪಾಠ ಕಲಿತು ಹೆಮ್ಮೆಪಡದೆ ಕಲಾಸೇವೆ ಮಾಡೆಂದು ಆಶೀರ್ವದಿಸಿ ಹೇಳಿದರು.

## ಆಸ್ಥಾನ ವಿದುಷಿ

ಸಂಗೀತ ನೃತ್ಯ, ಸಾಹಿತ್ಯದಲ್ಲಿ ಪರಿಣತರಾದವರಿಗೆ ಮಾತ್ರ ಅರಮನೆಯ ದರ್ಬಾರು ಕೆಲಸಕ್ಕೆ ಆಹ್ವಾನ ಬರುತ್ತಿತ್ತು. ಮೇಡಂರವರು ಇಂತಹ ಆಹ್ವಾನದ ಮೇರೆಗೆ ವಿದ್ವಾಂಸ ವಾಸುದೇವಾಚಾರ್ಯರ ಮನೆಯಲ್ಲಿ ಪರೀಕ್ಷೆಯನ್ನು ಎದುರಿಸಬೇಕಾಯಿತು. ಅಲ್ಲಿ ದೇವೋತ್ತಮ ಜೋಯಿಸರೂ ಇನ್ನಿತರ ಹತ್ತಾರು ಪರಿಣತರು ಸೇರಿದ್ದರು. ಗುರು ತಾಯಮ್ಮನವರೇ ನಟುವಾಂಗ ನಡೆಸಲು ಬಂದಿದ್ದರು. ಮೊದಲಿಗೆ ಒಂದು ವರ್ಣ ಮತ್ತು ಕೀರ್ತನೆಗಳೆರಡನ್ನು ಹಾಡಿಸಿದರು. ನಂತರ ಕುಳಿತೇ ಅಭಿನಯ ಮಾಡೆನ್ನಲು, ಮೇಡಂರವರು 'ಯುಕ್ತಕಿಂ ತವ' ಎಂಬ ಶ್ಲೋಕವನ್ನು ಅಭಿನಯಿಸಿದರು. ಭೈರವಿ ಪದ, ಜಾವಳಿಗಳನ್ನೂ ಮಾಡಿದರು. ನಂತರ ಗಣಪತಿ ಶಬ್ದ, ಭೈರವಿ ಜತಿಸ್ವರ, ಕಾಪಿ ತಿಲ್ಲಾನಗಳನ್ನು ನರ್ತಿಸಿದ್ದನ್ನೂ ಅವರು ನೆನಪಿಟ್ಟುಕೊಂಡಿದ್ದಾರೆ. ಅವುಗಳ ರಾಗ, ರಸಭಾವ, ಮುದ್ರೆಗಳ ಬಗ್ಗೆ ಅನೇಕ ಪ್ರಶ್ನೆಗಳನ್ನು ವಿದ್ವಾಂಸರು ಕೇಳಿದರೆಂದೂ, ತನಗೆ ತಿಳಿದಮಟ್ಟಿಗೆ ಹೇಳಿದೆನೆಂದೂ ಮೇಡಂ ತಿಳಿಸುತ್ತಾರೆ.



ಅಮರು ಶತಕ ಶ್ಲೋಕ....ಪುನಃ ಚಿಂತಾ

ಅರಮನೆಯ ಕೆಲಸ ದೊರೆತಮೇಲೆ, ವೆಂಕಟಲಕ್ಷ್ಮಮ್ಮನವರು ವಿದ್ವಾನ್ ಚಿಕ್ಕರಾಮರಾಯರಲ್ಲಿ ಹೆಚ್ಚಿನ ಸಂಗೀತ ಪಾಠ ಕಲಿಯಲು ಆರಂಭಿಸಿದರು. ಅವರ ಸಹನರ್ತಕಿಯರಾಗಿ ದರ್ಬಾರಿನಲ್ಲಿ ಮೆರೆದವರು, ಬಳ್ಳಾಪುರದ ಭವಾನಮ್ಮ, ಸೇರು ಕಡ್ಲೇ ಸುಬ್ಬಮ್ಮ, ರಾಜಮ್ಮ, ಪುಟ್ಟಮ್ಮ, ವ್ಯಾಸಮ್ಮ ಮುಂತಾದವರನ್ನು ಮೇಡಂ ಹೆಸರಿಸುತ್ತಾರೆ.

1939ರಲ್ಲಿ ಅರಮನೆಯ ಕೆಲಸಕ್ಕೆ ಮೇಡಂರವರು ಆಯ್ಕೆಯಾದರು. ಆಗ ಪ್ರಭು ನಾಲ್ವಡೀ ಕೃಷ್ಣರಾಜ ಒಡೆಯರ ಕಾಲ. ಮಹಾರಾಜರಿಗೆ ಸ್ವತಃ ಲಲಿತಕಲೆಗಳಲ್ಲಿ ಬಹಳಷ್ಟು ಆಸಕ್ತಿಯಿತ್ತು. ಕನ್ನಡನಾಡಿನ ಕಲಾವಿದರನ್ನಲ್ಲದೆ, ಹೊರಗಿನಿಂದ ಬಂದ ಅನೇಕ ಸಂಗೀತ, ನೃತ್ಯ ವಿದ್ವಾಂಸರನ್ನು ಮೈಸೂರು ಅರಮನೆ ಗೌರವಿಸಿತು, ಪೋಷಿಸಿತು. ಲಲಿತಕಲೆಗಳ ಈ ಉಚ್ಛ್ರಾಯ ಸ್ಥಿತಿಯನ್ನು ತಿಳಿದವರೇ ಬಲ್ಲರು ಆಗಿನ ವಾತಾವರಣವನ್ನು. ಮೈಸೂರಿನ ಮಹಾರಾಜರಿಂದ ಸಂಭಾವಿತನಾದ ಕಲಾವಿದ, ಅತ್ಯಂತ ಶ್ರೇಷ್ಠ ಕಲಾವಿದನಾಗಿರಲೇ ಬೇಕಿತ್ತು. ಹೀಗಿತ್ತು ಆಗಿನ ಸ್ಥಿತಿ.

ಈ ಸುಂದರ ವಾತಾವರಣದಲ್ಲಿ, ಮೇಡಂ ಅರಮನೆ ಸೇರಿದರು. ಅರಮನೆಯಲ್ಲಿ ಐದು ನರ್ತಕಿಯರ ಸೆಟ್ ಇರುತ್ತಿತ್ತು. ಅವರು ಸರದಿಯ ಪ್ರಕಾರ ಸೇವೆ ಸಲ್ಲಿಸಬೇಕಿತ್ತು. ದರ್ಬಾರ್ ಭಕ್ಷಿಯವರು ಯಾವ ಸೆಟ್ಟಿನವರು ಯಾವಾಗ ನರ್ತಿಸಬೇಕೆಂದು ನಿರ್ಧರಿಸುತ್ತಿದ್ದರು.

ಮೇಡಂ ಅರಮನೆಯ ಕೆಲಸಕ್ಕೆ ಸೇರಿದ ಮೂರು ತಿಂಗಳ ನಂತರ ಒಂದುದಿನ, ನಾಲ್ವಡೀ ಕೃಷ್ಣರಾಜ ಒಡೆಯರ ದೊಡ್ಡ ರಾಣಿಯವರಾದ ಕಾಟೇವಾಡಿಯಮ್ಮ ತಮಗೆ ಹೇಳಿ ಕಳಿಸಿದ ನೆನಪು ಮೇಡಂರವರಲ್ಲಿ ಇಂದಿಗೂ ಸಂತಸತರುತ್ತದೆ. ತಮ್ಮ ಮುಂದೆ ಕರೆದು, ನಿನ್ನ ಹೆಸರೇನು, ಯಾರಲ್ಲಿ ಪಾಠ ಕಲಿತೆ, ಮುಂತಾದುದನ್ನು ವಿಚಾರಿಸಿ ಕಳಿಸಿದ ನಂತರ, ಜನಾನಿಯಿಂದ ಆ ಸಲದ ಗಣಪತಿ ಹಬ್ಬಕ್ಕೆ

ವೆಂಕಟಲಕ್ಷಮ್ಮನವರಿಂದಲೇ ಕಟ್ಟಳೇ ಪೂಜೆ ನಡೆಯಬೇಕೆಂಬ ಆಜ್ಞೆ ಬಂತೆಂದು, ಮೇಡಂ ಹೆಮ್ಮೆಯಿಂದ ಇಂದಿಗೂ ಹೇಳಿಕೊಳ್ಳುತ್ತಾರೆ. ನಾಲ್ವಡಿಯವರು ಭಕ್ತಿಪರರು ಎಂದು ತಿಳಿದಿದ್ದರಿಂದ, ಮುತ್ತಯ್ಯ ಭಾಗವತರ ಕೃತಿ 'ಶಿವೆ ಪಾಹಿಮಾಂ' ಮತ್ತು ಕೃಷ್ಣಕರ್ಣಾಮೃತ ಶ್ಲೋಕ ಒಂದನ್ನು ಹದಿನೈದೇ ದಿನಗಳಲ್ಲಿ ಅಭ್ಯಾಸಮಾಡಿ, ನರ್ತಿಸಿದೆನೆಂದು ಸಂತಸದಿಂದ ಹೇಳುತ್ತಾ, ಮತ್ತೆ, ಮತ್ತೆ, ಆ ದಿನಗಳನ್ನು ಮೆಲುಕುಹಾಕುತ್ತಾರೆ.

## ಅರಮನೆಯಲ್ಲಿ . . .

ರಾಜರ ದರ್ಬಾರುಗಳಲ್ಲಿ ಸಮಯಾನುಸಾರ ಸಂಗೀತ ನೃತ್ಯ ಜರುಗುತ್ತಿತ್ತು. ಬಹುತೇಕ ಹಬ್ಬಗಳಂದು ಶಾಸ್ತ್ರಕ್ಕಾಗಿ ಅರಮನೆಯಲ್ಲಿ ನೃತ್ಯ ಮಾಡಬೇಕಿತ್ತು. ಹೀಗೆ ಗೌರಿ, ಗಣಪತಿಹಬ್ಬ, ದ್ವಾದಶಿ ಕಟ್ಟಳೇ ಪೂಜೆ ಮತ್ತು ನವರಾತ್ರಿ ದಿನಗಳಲ್ಲಿ ನರ್ತನ ಕಾರ್ಯಕ್ರಮವಿರುತ್ತಿತ್ತು. ಅರಮನೆಯ ಹಲವಾರು ಎಡೆಗಳಲ್ಲಿ ಗಣಪತಿಯನ್ನಿಡುತ್ತಿದ್ದರು. ನೃತ್ಯ ಮೇಳದವರು ಎಲ್ಲೆಡೆಗೂ ಭೇಟಿಕೊಟ್ಟು ಮುಜುರೆ ಮಾಡುವರು. 21ನೆಯ ದಿವಸ ಗಣಪತಿಯ ವಿಸರ್ಜನೆಯಂದು ಅಂಬಾವಿಳಾಸದಲ್ಲಿ ಸುಮಾರು ಅರ್ಧಗಂಟೆಯ ಕಾಲ ನೃತ್ಯ ಕಾರ್ಯಕ್ರಮವಿರುತ್ತಿತ್ತು. ಮಹಾರಾಣಿ ಪ್ರತಾಪಕುಮಾರಿಯ ಸಮ್ಮುಖದಲ್ಲೂ ಅನೇಕ ಕಾರ್ಯಕ್ರಮ ಜರುಗುತ್ತಿತ್ತು.

ಬಲಿಪಾಡ್ಯಮಿಯ ದಿವಸ, ಅರಮನೆಯ ದರ್ಬಾರಿನಲ್ಲಿ ವಿಶೇಷವಾಗಿ ನೃತ್ಯ ಕಾರ್ಯಕ್ರಮ ಏರ್ಪಾಡಾಗುತ್ತಿತ್ತು. ಬಲಿಯ ವಿಗ್ರಹವನ್ನು ರಚಿಸಿ, ಕಲ್ಯಾಣ ಮಂಟಪದಲ್ಲಿ ಪ್ರತಿಷ್ಠಾಪಿಸುತ್ತಿದ್ದರು. ಶುಭ್ರಸ್ನಾತರಾದ ಮಹಾರಾಜರು, ತಮ್ಮ ಆಭರಣ, ಪೇಟ, ಕತ್ತಿಯೆಲ್ಲವನ್ನೂ ಬಲಿಯ ವಿಗ್ರಹಕ್ಕೆ ಅರ್ಪಿಸಿ ಪೂಜೆಗೈದು, ದರ್ಬಾರಿನಲ್ಲಿ ಆಸೀನರಾಗುತ್ತಿದ್ದರು. ನೃತ್ಯದವರು, ವಾದ್ಯವೃಂದದವರು, ಪಂಡಿತರು, ಅಧಿಕಾರಿಗಳು, ಅರಸು

ಮನೆತನದವರೆಲ್ಲಾ ಅವರವರಿಗೆ ನಿಗದಿಪಡಿಸಿದ ಸ್ಥಳಗಳಲ್ಲಿ ಮೊದಲೇ ಬಂದು ಹಾಜರಿರುವರು. ಮಹಾರಾಜರ ಸವಾರಿ ಚಿತ್ತೈಸಿದಾಗ 'ಅದಬ್' ಎಂಬ ಕಟ್ಟಿಗೆಯವರ ಕೂಗಿನೊಂದಿಗೆ ಎಲ್ಲರೂ ನಿಶ್ಯಬ್ದವಾಗಿ ಗೌರವದಿಂದ ನಿಲ್ಲುತಿದ್ದರು. ಗಂಡಸರೆಲ್ಲರೂ ಬಿಳಿಯ ಶರಾಯಿ, ಕರಿಯ ನಿಲುವಂಗಿ, ಅಂಗರೇಖ, ಕಮರಬಂದ್. ಜರಿಪೇಟ–ಆಸ್ಥಾನದ ಸಮವಸ್ತ್ರ ಧರಿಸಿರುತ್ತಿದ್ದರು. ನರ್ತಕಿಯರ ಹಿಂದೆ ನಿಂತ ವಾದ್ಯವೃಂದದವರೂ ಇದೇ ರೀತಿ ಉಡುಪುತೊಡುತ್ತಿದ್ದರು. ಮಹಾರಾಜರು ಆಗಮಿಸಿ, ಕುಳಿತ ನಂತರ ದೀವಟಿಗೆಯ ಸಲಾಮಾದ ನಂತರ ನೃತ್ಯ ಕಾರ್ಯಕ್ರಮ ಆರಂಭವಾಗುತ್ತಿತ್ತು. ಅವರು ಹರ್ಷಚಿತ್ತರಾಗಿದ್ದರೆ ಸ್ವಲ್ಪ ಹೆಚ್ಚು ಕಾಲ ನೃತ್ಯ ನಡೆಯುವುದು, ಇಲ್ಲದಿದ್ದರೆ, ಅವರ ಕಣ್ಸನ್ನೆಯನ್ನರಿತ ದರ್ಬಾರು ಭಕ್ಷಿಯವರ ಸನ್ನೆಯ ಮೇರೆಗೆ ಕಾರ್ಯಕ್ರಮ ಮುಗಿದುಹೋಗುತ್ತಿತ್ತು. ಮಹಾರಾಜರ ನಿರ್ಗಮನದ ನಂತರ ಎಲ್ಲರೂ ತೆರಳುತ್ತಿದ್ದರು. 30 ವರ್ಷಗಳ ಕಾಲದ ತಮ್ಮ ಅರಮನೆಯ ಸೇವೆಯ ಅನೇಕ ಸ್ವಾರಸ್ಯಕರವಾದ ಅನುಭವಗಳನ್ನು ಮೇಡಂ ಆಗಾಗ ಹೇಳುತ್ತಿರುತ್ತಾರೆ.

## ಜೋಡಿ ಮೇಳ

ಕೃಷ್ಣರಾಜ ಒಡೆಯರವರ ವರ್ಧಂತಿ ಉತ್ಸವದಂದು ಜೋಡಿ ಮೇಳ ನಡೆಸಿದ ಅದ್ಭುತವನ್ನು ಅವರ ಬಾಯಿಂದಲೇ ಕೇಳಬೇಕು. ಅಂದು ಇಬ್ಬರು ನರ್ತಕಿಯರ ಎರಡು ಮೇಳದವರು ಎದುರುಬದುರಾಗಿ ನಿಂತು, ಒಂದೇ ನೃತ್ಯವನ್ನೇ ಯಾವ ವ್ಯತ್ಯಾಸವಿಲ್ಲದಂತೆ ನರ್ತಿಸಿದುದನ್ನು ಕೇಳಿ ಇದು ನಿಜವೇ ಎನ್ನಿಸದಿರದು. ಮತ್ತೆ ಮೇಡಂರವರು ಕೊನೆಯ ಮಹಾರಾಜರೆನಿಸಿ, ನಂತರ ರಾಜ್ಯಪಾಲರಾಗಿ ಮೆರೆದ ಜಯಚಾಮರಾಜ ಒಡೆಯರವರ ಪಟ್ಟಾಭಿಷೇಕ ಮಹೋತ್ಸವ ಮತ್ತು ಮದುವೆಗಳಲ್ಲಿ ತಾವು



ಜಾವಳಿ : ಸುಂದರಾಂಗನೇ....

ಭಾಗಿಯಾಗಿ ನಡೆಸಿದ ಕಾರ್ಯಕ್ರಮಗಳ ವಿಷಯಗಳನ್ನೂ ಹೇಳುವಾಗ ನಮಗೆ ಅಂದಿನ ಚಿತ್ರ ಕಣ್ಮುಂದೆ ಕಟ್ಟುತ್ತದೆ.

## ಸನ್ಮಾನಗಳು

ಹೀಗೆ ಇಂದಿನ ಕಾಲಕ್ಕೆ ಅತ್ಯಪೂರ್ವವಾದ ಅನುಭವಗಳಿರುವ ಗುರು ವೆಂಕಟಲಕ್ಷ್ಮಮ್ಮನವರನ್ನು 1963ರಲ್ಲಿ ಮೈಸೂರು ವಿಶ್ವವಿದ್ಯಾನಿಲಯ ತನ್ನ ಲಲಿತಕಲಾ ಕಾಲೇಜಿನ ನೃತ್ಯದ ಡಿಪ್ಲೊಮಾ ವಿಭಾಗಕ್ಕೆ ಪ್ರಾಧ್ಯಾಪಕರಾಗಿ ಗುತ್ತಿಗೆಯ ಮೇಲೆ ಆರಿಸಿತು. ಅಲ್ಲಿ ಅವರು ರೀಡರ್ ಆಗಿ 9 ವರ್ಷಗಳ ಕಾಲ ಕೆಲಸಮಾಡಿ ಅನೇಕ ವಿದ್ಯಾರ್ಥಿ, ವಿದ್ಯಾರ್ಥಿನಿಯರನ್ನು ತರಬೇತಿಗೊಳಿಸಿದರು. ಪ್ರೊ|| ಸಾಂಬಮೂರ್ತಿಯವರು ಕಲಾ ವಿಭಾಗದ ಮುಖ್ಯಸ್ಥರಾಗಿದ್ದರು. ಅಲ್ಲದೆ ಸ್ವಂತವಾಗಿ ಭರತಕಲಾನಿಕೇತನ್ ಎಂಬ ನೃತ್ಯಶಾಲೆಯನ್ನು ನಡೆಸಲು ಪ್ರಾರಂಭಿಸಿದರು. ಅಮೇರಿಕದ ಬಫೆಲೋ ವಿಶ್ವವಿದ್ಯಾನಿಲಯದಿಂದ ವರ್ಷಕ್ಕೊಮ್ಮೆ ನೃತ್ಯ ಕಲಿಯಲು ಬಂದ ವಿದ್ಯಾರ್ಥಿಗಳ ಗುಂಪೊಂದು ಮೈಸೂರು ವಿಶ್ವವಿದ್ಯಾನಿಲಯದ ಡಾ|| ವೆಂಕಟಲಕ್ಷ್ಮಮ್ಮನವರಲ್ಲಿ ತರಬೇತಿ ಪಡೆಯುತ್ತಿದ್ದರು. 1962ರಲ್ಲಿ ಕರ್ನಾಟಕದ ಸಂಗೀತ ನೃತ್ಯ ಅಕಾಡೆಮಿ ಅವರನ್ನು ಸನ್ಮಾನಿಸಿ ಗೌರವಿಸಿತು. ಆಗ ದೆಹಲಿಯಲ್ಲಿ ಅಕಾಡೆಮಿಯ ಅಧ್ಯಕ್ಷರಾಗಿದ್ದವರು ಜಯಚಾಮರಾಜ ಒಡೆಯರವರು.

ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯರವರು ಇವರ ಅಭಿನಯ ಸಾಮರ್ಥ್ಯವನ್ನು ಪರಿಗಣಿಸಿ, ಮೈಸೂರು ಭರತನಾಟ್ಯ ಶೈಲಿಯ ದಾಖಲೆಯೊಂದಿರಲೇಬೇಕೆಂಬುದನ್ನು ಮನಗೊಂಡು ಇವರ ಅಭಿನಯದ ಚಿತ್ರಣವನ್ನು ತಾವೇ ಖುದ್ದಾಗಿ ನಿಂತು ಮಾಡಿಸಿದರು. ಅಲ್ಲದೆ ಸಪ್ರೂಹೌಸಿನಲ್ಲಿ ಅಕಾಡೆಮಿಯ ವತಿಯಿಂದ ಕಾರ್ಯಕ್ರಮ ಒಂದನ್ನೂ, ರಾಷ್ಟ್ರಪತಿ ಭವನದಲ್ಲಿ 40 ನಿಮಿಷಗಳ ಕಾರ್ಯಕ್ರಮ ಒಂದನ್ನೂ, ನಿಯೋಜಿಸಲಾಗಿತ್ತು. ಅಮರುಶತಕ ಶ್ಲೋಕ,




ಅಂದಿನ ಮುಖ್ಯಮಂತ್ರಿ ನಿಜಲಿಂಗಪ್ಪನವರಿಂದ ಮೈಸೂರು ರಾಜ್ಯ ಸಂಗೀತ ನೃತ್ಯ ಅಕಾಡೆಮಿ ಪ್ರಶಸ್ತಿ

ಅಷ್ಟಪದಿ, ಜಾವಳಿ ಮಾಡಬೇಕೆಂದು ಅಂದಿನ ರಾಷ್ಟ್ರಪತಿ ಡಾ॥ ಸರ್ವಪಲ್ಲಿ ರಾಧಾಕೃಷ್ಣನ್, ಮೇಡಂರವರಿಂದ ಮಾಡಿಸಿ ನೋಡಿ ಸಂತೋಷಪಟ್ಟರು.

1974ರಲ್ಲಿ ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ಅವರಿಂದ ಕಾರ್ಯಾಗಾರವನ್ನು 15 ದಿನ ನಡೆಸಿತು. 1977ರಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಇವರಿಗೆ ಗೌರವ ಡಾಕ್ಟರೇಟ್ ಪದವಿಯಿತ್ತು ಸನ್ಮಾನಿಸಿತು. 1983ರಲ್ಲಿ ನನ್ನ ಸಂಸ್ಥೆ ನೂಪುರದಲ್ಲಿ ಗುರುಗಳು ಆರು ತಿಂಗಳ ಕಾಲ ಕಾರ್ಯಾಗಾರವನ್ನು ಕೇಂದ್ರ ಸಂಗೀತ ನಾಟಕ ಅಕಾಡೆಮಿಯ ಆಶಯದಂತೆ ನಡೆಸಿದರು. ಇದರ ಪ್ರಾಮುಖ್ಯತೆಯನ್ನು ಮನಗೊಂಡ ಕೇಂದ್ರ ಅಕಾಡೆಮಿ ಮತ್ತೆ 1984ರಲ್ಲಿ ಪ್ರೌಢಶಿಕ್ಷಣ ಕಾರ್ಯಾಗಾರ ಒಂದನ್ನು ನೃತ್ಯ ಪಾಠ ಮಾಡುವ ಗುರುಗಳಿಗಾಗಿಯೇ, ಸಂಗೀತ ತಜ್ಞ, ವಿಮರ್ಶಕ ಶ್ರೀ ಬಿ. ವಿ. ಕೆ. ಶಾಸ್ತ್ರಿಯವರ ನೇತೃತ್ವದಲ್ಲಿ ಗುರು ವೆಂಕಟಲಕ್ಷಮ್ಮನವರಿಂದ ನಡೆಸಿತು.

1986ರಲ್ಲಿ ಮುಂಬಯಿ ಮೈಸೂರು ಅಸೋಸಿಯೇಷನ್ ಈ ಧೀಮಂತ ಕಲಾವಿದೆಯ 80ನೆಯ ಹುಟ್ಟುಹಬ್ಬವನ್ನು, ಅವರ ರಜತಮಹೋತ್ಸವದಲ್ಲಿ ಆಚರಿಸಿ ಗೌರವಿಸಿತು. ಅಲ್ಲದೆ ಮೈಸೂರು ಶೈಲಿಗೆ ಮಾನ್ಯತೆ ಕೊಟ್ಟು ಅವರಿಂದ ಪ್ರಾತ್ಯಕ್ಷಿಕೆ, ಅಭಿನಯ, ಶಿಷ್ಯೆಯರಿಂದ ಕಾರ್ಯಕ್ರಮವೆಲ್ಲವನ್ನೂ ಏರ್ಪಡಿಸಿ ವ್ಯಾಪಕವಾದ ಪ್ರಚಾರವನ್ನಿತ್ತರು. ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಇವರಿಗೆ 1988ರಲ್ಲಿ ಸಂದಿತು. 1989ರಲ್ಲಿ ಬೆಂಗಳೂರಿನ ಗಾಯನ ಸಮಾಜ ಹಿಂದೆಂದೂ ನಡೆಯದಂತಹ ಕೆಲಸವನ್ನು ಮಾಡಿತು. ಅದು ಡಾ॥ ಶ್ರೀಮತಿ ವೆಂಕಟಲಕ್ಷಮ್ಮನವರನ್ನು ತಮ್ಮ ವಾರ್ಷಿಕ ಸಂಗೀತ ಸಮ್ಮೇಳನದದ ಅಧ್ಯಕ್ಷೆಯಾಗಿ ಆಯ್ಕೆ ಮಾಡಿ 'ಸಂಗೀತ ಕಲಾರತ್ನ' ಬಿರುದು ನೀಡಿ ಮೈಸೂರುಶೈಲಿಯ ನೃತ್ಯ, ಅಭಿನಯ, ಕಲಾಪ್ರಕಾರಕ್ಕೆ ಹೆಚ್ಚಿನ ಆದ್ಯತೆಯಿರುವ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಅವರನ್ನು ಗೌರವಿಸಿತು. ಅಂದಿನವರೆಗೆ ಈ ಸಮ್ಮೇಳನಕ್ಕೆ ಸಂಗೀತಗಾರರಲ್ಲದೆ ಇನ್ನಾವ ಕಲಾವಿದರೂ ಅಧ್ಯಕ್ಷತೆ ವಹಿಸಿರಲಿಲ್ಲ. 1990ರಲ್ಲಿ ದೆಹಲಿಯಲ್ಲಿ ಹೆಸರಾಂತ ನೃತ್ಯ ಕಲಾವಿದೆ ಶ್ರೀಮತಿ ಕೋಮಲ ವರದನ್ ತಮ್ಮ ಶಾಲೆಯಲ್ಲಿ ಇವರಿಂದ ಕಾರ್ಯಾಗಾರ



ರಾಷ್ಟ್ರಪತಿಭವನದಲ್ಲಿ... ಡಾ|| ಸರ್ವಪಲ್ಲಿ ರಾಧಾಕೃಷ್ಣ ಅವರಿಂದ ಸನ್ಮಾನ

ನಡೆಸಿ, ಕೇಂದ್ರದ ದೂರದರ್ಶನದಲ್ಲಿ ಈಕೆಯ ಅಭಿನಯ ಪ್ರಸಾರವಾಗುವಂತೆ ಕಾರ್ಯಕ್ರಮ ನಿಯೋಜಿಸಿದರು.

ಸಾಹಿತಿ ಚದುರಂಗರವರ ನೇತೃತ್ವದಲ್ಲಿ ಗುರು ವೆಂಕಟಲಕ್ಷ್ಮಮ್ಮನವರ ಸಾಕ್ಷ್ಯಚಿತ್ರ ಒಂದನ್ನು ವಾರ್ತಾ ಮತ್ತು ಪ್ರಚಾರ ಇಲಾಖೆ ನಿರ್ಮಿಸಿದೆ. ಅಲ್ಲದೆ ನಮ್ಮ ಸಂಗೀತ ನೃತ್ಯ ಅಕಾಡೆಮಿಯೂ ಇಂತಹ ಸಾಕ್ಷ್ಯಚಿತ್ರ (ವಿಡಿಯೋ) ಒಂದನ್ನು ನಿರ್ಮಿಸಿದೆ.

ಮತ್ತೇ ಅದೇ ವರ್ಷ ಸಂಗೀತ ನೃತ್ಯಕ್ಕೆಂದೇ ಹುಟ್ಟಿಕೊಂಡಿರುವ ಮದ್ರಾಸಿನ 'ಶ್ರುತಿ' ಮಾಸಿಕಪತ್ರಿಕೆ ಹೆಚ್ಚಿನ ಪ್ರಸಿದ್ಧ ನೃತ್ಯ ಗುರುಗಳನ್ನು ಕಲೆಹಾಕಿ ವಿವಿಧ ಭರತನಾಟ್ಯ ಶೈಲಿಗಳ ಬಗ್ಗೆ ವಿಚಾರ ಸಂಕಿರಣ ಪ್ರಾತ್ಯಕ್ಷಿಕೆ ನಡೆಸಿದಾಗ ಮೈಸೂರು ಭರತನಾಟ್ಯ ಶೈಲಿಯ ಪ್ರತಿಪಾದಕರಾದ ಗುರು ವೆಂಕಟಲಕ್ಷ್ಮಮ್ಮನವರ ಅಭಿನಯ, ಮದರಾಸಿನ ಕಲಾಭಿಮಾನಿಗಳ ಮನಸೂರೆಗೊಂಡಿದ್ದೊಂದು ನಮಗೆ ಹೆಮ್ಮೆಯ ವಿಷಯ. ಕೃಷ್ಣಗಾನ ಸಭೆಯಲ್ಲಿ ಪ್ರಾತ್ಯಕ್ಷಿಕೆ ಮತ್ತು ಕಾರ್ಯಕ್ರಮ, ಪ್ರಸಿದ್ಧನರ್ತಕಿ ಸುಧಾರಾಣಿ ರಘುಪತಿ ಅವರ ಅಧ್ಯಕ್ಷತೆಯಲ್ಲಿ 1991ರಲ್ಲಿ ನಡೆಯಿತು.

ಹೀಗೇ ಅನೇಕಾನೇಕ ಸಂಸ್ಥೆಗಳಿಂದ ಸನ್ಮಾನಿತರಾಗಿರುವ ಗುರು ಡಾ॥ ವೆಂಕಟಲಕ್ಷ್ಮಮ್ಮನವರಿಗೆ **1992**ರಲ್ಲಿ ರಾಷ್ಟ್ರದ ಅತ್ಯಮೂಲ್ಯ ಪದ್ಮಭೂಷಣ ಪ್ರಶಸ್ತಿ ಸಂದಿದ್ದು ನಮ್ಮ ಕರ್ನಾಟಕಕ್ಕೇ ಒಂದು ಹೆಮ್ಮೆಯ ವಿಷಯ. ಇಷ್ಟೆಲ್ಲಾ ಬಿರುದು ಸನ್ಮಾನಗಳನ್ನು ಗಳಿಸಿದ್ದರೂ, ಮೇಡಂರವರು ತಮ್ಮನ್ನು ತಾವೇ ಪ್ರಶಂಸೆ ಮಾಡಿಕೊಳ್ಳುವುದಾಗಲೀ, ಇತರರ ಬಗ್ಗೆ ಲಘುವಾಗಿ ಮಾತಾಡುವುದನ್ನಾಗಲೀ ನಾನು ಕೇಳಿಲ್ಲ. ಚಿಕ್ಕ ಮಕ್ಕಳಿಂದ, ದೊಡ್ಡವರವರಿಗೂ ಒಂದೇ ರೀತಿಯಾಗಿ ನೋಡಿ, ಸರಸವಾಗಿ ಮಾತಾಡುವುದು ಅವರ ಸುಸ್ವಭಾವ. ಅಂತೆಯೇ ದೈನಂದಿನ ಜೀವನದಲ್ಲಿ ಸಹ ಶಿಸ್ತು, ಅಚ್ಚುಕಟ್ಟುತನ, ನಾಜೂಕು ಇವೂ ಅವರಲ್ಲಿ ಕಾಣುವ ಸಹಜ ಗುಣಗಳು.



ದಿವಂಗತ ಪ್ರಧಾನಿ ಶ್ರೀಮತಿ ಇಂದಿರಾಗಾಂಧಿಯವರೊಡನೆ... ಡಾ।। ಕೆ. ವೆಂಕಟಲಕ್ಷ್ಮಮ್ಮ

## ಅನುಭವ

ಮೇಡಂ ವೆಂಕಟಲಕ್ಷಮ್ಮನವರಲ್ಲಿ ನೃತ್ಯ ಕಲಿಯುವುದೇ ಒಂದು ಹೊಸ ಅನುಭವ. ಅವರು ಹೇಳಿಕೊಡುವುದಕ್ಕಿಂತ ಮಾಡಿ ತೋರಿಸುವುದೇ ಹೆಚ್ಚಿನ ಪ್ರಭಾವ ಬೀರುವ ಅನುಭವ. ಅವರು ಯಾವ ವಿಚಾರವನ್ನು ತಿಳಿಸಬೇಕಾದರೂ ಬಹಳ ಕುತೂಹಲಕಾರಿಯಾಗಿ, ಅದಕ್ಕೆ ಪೂರಕವಾದ ಕಥೆಗಳೊಡನೆ ಸಂದರ್ಭೋಚಿತವಾಗಿ ಹೇಳುತ್ತಿದ್ದುದೊಂದು ಶಿಷ್ಯರಿಗೆ ದೊಡ್ಡ ಆಕರ್ಷಣೀಯ ವಿಷಯ. ಅವರ ಪಾಂಡಿತ್ಯದ ಆಳ, ತಿಳುವಳಿಕೆ, ಕನ್ನಡದ ಜನತೆಯ ಸಂಸ್ಕೃತಿಯಿಂದ, ನುಡಿಯಿಂದ ಹುಟ್ಟಿಬಂದ ಅನೇಕ ನೃತ್ಯಯೋಗ್ಯ ಕೃತಿಗಳು ಇವುಗಳ ಪರಿಚಯ ಅವರಲ್ಲಿ ಸಾವಧಾನವಾಗಿ ಕಲಿತವರಿಗಲ್ಲದೆ, ಇಂದಿನ ವೇಗ ಯುಗದ ಪಾಠಾಂತರದಲ್ಲಿ ದುಸ್ಸಾಧ್ಯ. ನಾನು ಎಷ್ಟೋ ಸಲ ಅವರ ಜ್ಞಾಪಕಶಕ್ತಿಗೆ ಮಾರುಹೋಗಿದ್ದೇನೆ.

ಪಾಠ ಕ್ರಮದ ಬಗ್ಗೆ ಮಾತನಾಡುವಾಗ, ಮೇಡಂರವರು ಎಷ್ಟೋಸಲ ಈ ಕೆಲವು ವಿಚಾರಗಳನ್ನು ಮಂಡಿಸಿದ್ದಾರೆ.

> **ಮೈಸೂರು ಶೈಲಿಯ ಭರತನಾಟ್ಯಕ್ಕೆ ಒಂದು ಪ್ರತ್ಯೇಕತೆ ಇದೆ. ಅದನ್ನು ಹೀಗೆಂದು ಹೇಳಲು ಬಾರದಾದರೂ, ಅದರಲ್ಲಿ ಒಂದು ಲಾಲಿತ್ಯ ಪೂರ್ಣ ಸರಣಿಯಿದೆ. ಲೆಕ್ಕಾಚಾರದ ಅಭಿನಯವಲ್ಲ ಇಲ್ಲಿ. ಅಂಗ ಪ್ರತ್ಯಂಗ ಉಪಾಂಗಗಳ ಬಳಕೆ ಹೆಚ್ಚಾಗಿದೆ. ಸಾತ್ವಿಕ ಅಭಿನಯಕ್ಕೆ ಇಲ್ಲಿ ಬಹಳ ಪ್ರಾಶಸ್ತ್ಯವಿದೆ ಎಂಬುದು ಮೇಡಂರವರ ಅಭಿಪ್ರಾಯ.**

ಹಿಂದೆ ಗುರುಕುಲ ವಾಸದಲ್ಲಿ ಕಟ್ಟುನಿಟ್ಟಿತ್ತು. ಈಗ ಬರತಕ್ಕಂತಹ ವಿದ್ಯಾರ್ಥಿಗಳ ರೀತಿಯೇ ಬೇರೆ ವಿಧವಾಗಿರುತ್ತದೆ. ಅವರ ಮನೋಭಾವ, ಕಲಿಕೆಯ ಸ್ಥರ, ಶ್ರದ್ಧೆ, ಭಕ್ತಿ, ಆಸಕ್ತಿಗಳನ್ನು ಕಂಡುಕೊಂಡನಂತರವೇ ಅವರಿಗೆ ಸರಿಯಾದ ಪಾಠ ಮಾಡಲು



ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯ ಅಭಿನಯ ಶಿಬಿರದಲ್ಲಿ
ಅಂದಿನ ಸಂಸ್ಕೃತಿ ಸಚಿವ ಡಾ।। ಜೀವರಾಜ ಆಳ್ವ ಅವರು ಡಾ।। ಕೆ. ವೆಂಕಟಲಕ್ಷಮ್ಮನವರನ್ನು
ಸನ್ಮಾನಿಸುತ್ತಿರುವುದು.

ಸಾಧ್ಯ. ನನ್ನ ಗುರುಗಳು ಯಾವ ರೀತಿ ಪಾಠ ಮಾಡುತ್ತಿದ್ದರೋ ಅದೇ ಕ್ರಮ ಅನುಸರಿಸಲು ಆದಷ್ಟು ಪ್ರಯತ್ನ ಪಡುತ್ತೇನೆ ಎನ್ನುತ್ತಾರೆ ಮೇಡಂ. ಶಿಷ್ಯೆಯ ಸಾಮರ್ಥ್ಯವನ್ನರಿತು, ಶಾಸ್ತ್ರೀಯತೆಗೆ ಕುಂದು ಬಾರದಂತೆ, ನೋಡುವ ಪ್ರೇಕ್ಷಕರಿಗೆ ರಂಜನೀಯವೆನಿಸುವಂತೆ ಕಾಲಕ್ಕೆ ತಕ್ಕಂತಹ ಪಾಠ ಮಾಡಬೇಕಾಗುತ್ತದೆ ಎಂಬ ವಿಶಾಲ ಮನೋಭಾವ ಅವರಿಗಿದೆ.

ಭಾಷಾ ಜ್ಞಾನ, ಸಂಗೀತ ಜ್ಞಾನ ಈಗಿನ ವಿದ್ಯಾರ್ಥಿಗಳಲ್ಲಿ ಕಡಿಮೆ ಇರುವುದರಿಂದ, ಪ್ರತಿ ಮಾತಿನ ಅರ್ಥ ಹೇಳಿ ಸನ್ನಿವೇಶ ವಿವರಿಸಿ, ಆದಷ್ಟೂ ಮನದಟ್ಟು ಮಾಡಿಸಬೇಕಾಗುತ್ತದೆ. ವಿವರವಾಗಿ ಸಾಹಿತ್ಯವನ್ನು ಬರೆಸಿ, ನಾನು ಹಲವಾರು ಸಲ ಮಾಡಿತೋರಿಸಿ, ಪುನಃ ಪುನಃ ಶಿಷ್ಯೆಯಿಂದ ಅದನ್ನು ಅಭ್ಯಾಸ ಮಾಡಿಸುತ್ತೇನೆ ಎನ್ನುತ್ತಾರೆ ಮೇಡಂ.

## ನವ್ಯದೃಷ್ಟಿ

ಈಗಿನ ಹೊಸ ಕಾವ್ಯ, ಸಾಹಿತ್ಯಗಳನ್ನು ನೃತ್ಯಕ್ಕೆ ಅಳವಡಿಸುವುದು ಸಮಂಜಸವೇ ಎಂದಾಗ 'ಏಕೆ ಮಾಡಬಾರದು' ಎಂಬ ಮರು ಪ್ರಶ್ನೆಯೇ ಅವರಿಂದ ಬರುತ್ತದೆ. ಹಿಂದೆ ಸಂಪರ್ಕದ ಅಡಚಣೆಯಿಂದ ಹೊಸ ವಿಷಯಗಳು ಹರಡಲು ನಿಧಾನವಾಗುತ್ತಿತ್ತು. ಈಗಿನ ಜನಕ್ಕೆ ಹಿತವಾಗಿ ಕಂಡುದನ್ನು ಮಾಡುವುದರಲ್ಲಿ ತಪ್ಪಿಲ್ಲ ಎನ್ನುವ ಅವರು, ಇನ್ನೂ ನವ ಉತ್ಸಾಹದಿಂದ ಕಲೆಯ ಬೆಳವಣಿಗೆಯಲ್ಲಿ ಪಾಲ್ಗೊಳ್ಳಲು ಸಿದ್ಧರಿದ್ದಾರೆ. ಪ್ರಯೋಗ ಮಾಡಬೇಕಾದದ್ದು ಕಲಾವಿದರ ಕರ್ತವ್ಯ. ಶಾಸ್ತ್ರೀಯತೆಯನ್ನು ಬಿಡಬಾರದು. ಶಾಸ್ತ್ರೀಯ ಚೌಕಟ್ಟಿನಲ್ಲೇ ಕಲೆಯನ್ನು ಬೆಳಸಬೇಕು. ಅಂತಹ ಹಲವಾರು ಪ್ರಯತ್ನಗಳನ್ನು ನಾನೂ ಮಾಡಿದ್ದೇನೆ ಎಂದು ಸಂತೋಷದಿಂದ ಹೇಳುತ್ತಾರೆ.

ಕಾಲಕ್ಕೆ ತಕ್ಕಂತೆ ಕಲೆಯ ಬೆಳವಣಿಗೆ ಅನಿವಾರ್ಯ ಎನ್ನುವ ಮೇಡಂರವರು ತಾವೇ ಸ್ವತಃ 'ಪರಂಪರಾಧಾರಾ' ಎಂಬ ನೃತ್ಯ ರೂಪಕವನ್ನು ನಿರ್ದೇಶಿಸಿದ್ದಾರೆ. ದೇವಲೋಕದಿಂದ ಭೂಲೋಕಕ್ಕೆ



ಮದ್ರಾಸಿನ ಮ್ಯೂಸಿಕ್ ಅಕಾಡೆಮಿಯ ಅಧ್ಯಕ್ಷ ಶ್ರೀ ಟಿ. ಟಿ. ವಾಸು ಅವರು ನೂಪುರದ 'ನಿತ್ಯನೃತ್ಯ'
ರಾಷ್ಟ್ರೀಯ ನೃತ್ಯೋತ್ಸವದಲ್ಲಿ ಡಾ|| ಕೆ. ವೆಂಕಟಲಕ್ಷ್ಮಮ್ಮನವರನ್ನು ಸನ್ಮಾನಿಸುತ್ತಿರುವುದು

ನೃತ್ಯಕಲೆ ಹರಡಿದುದನ್ನು ವಿವರಿಸುವುದೇ ಈ ನೃತ್ಯರೂಪಕದ ವೈಶಿಷ್ಟ್ಯ.

ಮೇಡಂರವರು ಇಂದಿಗೂ ಉತ್ಸಾಹದ ಚಿಲುಮೆಯಾಗಿ ಉಳಿದಿರುವುದೊಂದು ವಿಶೇಷ. ಯಾರು ಎಲ್ಲಿ ಸಮಾರಂಭಕ್ಕೆ ಕರೆದರೂ ಸಹೃದಯರಾಗಿ ತಮ್ಮ ಪ್ರಯಾಣದ ಆಯಾಸವನ್ನು ಪರಿಗಣಿಸದೆ ಹೋಗುತ್ತಾರೆ. ಅಲ್ಲದೆ 89ರ ವರ್ಷದ ಇವರನ್ನು ಅಭಿನಯಿಸಿ ಮಾಡಿತೋರಿಸಿ ಎಂದು ಕೇಳಿದಾಕ್ಷಣ, ಅವರ ಮುಖಕ್ಕೆ ಕಳೆಯೇರಿ, ಹರ್ಷದಿಂದ ತಾವೇ ಹಾಡುತ್ತಾ ನಾವು ಕಂಡುಕೇಳದಂತಹ ಅನೇಕ ಕೃತಿಗಳನ್ನು ಅಭಿನಯಿಸಿ ತೋರುವ ಅವರ ಕಲಾಭಿಜ್ಞತೆ ಅಪರೂಪ. ಇವರಿಂದ ವಿದ್ಯೆ ಪಡೆದು, ಅವರ ಮಾರ್ಗದರ್ಶನದಲ್ಲಿ ಕಲಾವಿದರಾದವರಲ್ಲಿ ಅವರ ಮೊಮ್ಮಗಳು ಶ್ರೀಮತಿ ಶಕುಂತಲ ಹನುಮಂತಪ್ಪ ಮೈಸೂರಿನ ಲಲಿತಕಲಾ ಕಾಲೇಜಿನ ನೃತ್ಯ ವಿಭಾಗದಲ್ಲಿ ಪ್ರಾಧ್ಯಾಪಿಕೆ. ಅವರಿಂದ ಅಭಿನಯದಲ್ಲಿ ವಿಶೇಷವಾಗಿ ತರಬೇತಿ ಪಡೆದ ಶ್ರೀಮತಿ ಲಲಿತ ಶ್ರೀನಿವಾಸನ್ ಬೆಂಗಳೂರಿನ ನೂಪುರ ನೃತ್ಯ ಶಾಲೆಯ ನಿರ್ದೇಶಕಿ. ಅಲ್ಲದೆ ಇನ್ನೂ ಅನೇಕ ಶಿಷ್ಯ ಶಿಷ್ಯೆಯರು, ರಾಷ್ಟ್ರದ ಇನ್ನಿತರೆಡೆಯೂ ದೇಶದಲ್ಲೂ ನೆಲಸಿ ಇವರ ಪರಂಪರೆಯನ್ನು ಉಳಿಸಲು ಶ್ರಮಿಸುತ್ತಿದ್ದಾರೆ. ಮೈಸೂರಿನಲ್ಲಿ ಅಪರ್ಣ ಸಿಂಧೂರ್, ನವರಸ ನಾಟ್ಯಶಾಲೆ ನಡೆಸುತ್ತಿದ್ದಾರೆ. ಕೃಷ್ಣವೇಣಿ-ಗಣೇಶ ನೃತ್ಯಶಾಲೆ, ಲಲಿತ ಹೆಚ್. ರಾವ್-ಶಾಂತಲಾ ನೃತ್ಯ ನಿಕೇತನ್, ವಿದ್ಯಾ ಮತ್ತು ರಶ್ಮಿ-ಮಾತೃಕಾ ನೃತ್ಯ ಶಾಲೆ ನಡೆಸುತ್ತಿದ್ದಾರೆ.

ಸ್ವಿಟ್ಜರ್ಲ್ಯಾಂಡಿನಲ್ಲಿ ನೆಲಸಿರುವ ಎಸ್ತರ್ ಮತ್ತು ಕೇಶವ ದಂಪತಿಗಳು ಅಲ್ಲಿ ಮೈಸೂರು ಶೈಲಿಯ ಕಲೆಯನ್ನು ಪ್ರಚಾರ ಮಾಡುತ್ತಿದ್ದಾರೆ.

ಹುಟ್ಟಿದೆಲ್ಲೋ, ಬೆಳೆದಿದ್ದೆಲ್ಲೋ, ಏನೇನೋ ಜೀವನದಲ್ಲಿ ಬಂದರೂ, ಗುರುಗಳ ಆಶೀರ್ವಾದದಿಂದ ಎಲ್ಲವನ್ನೂ ಎದುರಿಸಿ ಈವರೆಗೂ ನಡೆಸಿದ್ದಾಯಿತು. ನನಗೆ ಕಲೆಯ ಬಗ್ಗೆ ಮಾತನಾಡಲು

ಬೇಸರವೇ ಇಲ್ಲ. ನನ್ನ ದೈವ ಕಲೆ. ನನ್ನ ಗುರುಗಳು ನನಗೆ ಕೊಟ್ಟ ವಿದ್ಯೆಯನ್ನು ಧ್ಯೇಯವಾಗಿಟ್ಟುಕೊಂಡು ನಾಲ್ಕು ಜನಕ್ಕೆ ಉಪಯೋಗವಾಗುವಂತೆ ಜೀವನ ನಡೆಸಿದ್ದೇನೆ ಎಂಬ ತೃಪ್ತಿ ನನಗಿದೆ. ಹೀಗೆಯೇ ನನ್ನ ಕಾಲ ಕಳೆದರೆ ಸಾಕು' ಎನ್ನುತ್ತಾರೆ ಮೇಡಂ.

ಮುಂದಿನ ಪೀಳಿಗೆಗೆ ನಾನು ಹೇಳುವುದಿಷ್ಟೆ 'ಗುರುವಿನ ಅಂಶ ಉಳಿಸುವುದು ನಿಮ್ಮ ಕರ್ತವ್ಯ. ಗುರುವಿನ ಆಶೀರ್ವಾದ, ಕಲೆಯ ಬಲ ನಿಮ್ಮನ್ನು ಸತತವಾಗಿ ಕಾಯುತ್ತದೆಂಬುದನ್ನು ಮರೆಯಬೇಡಿ'.

ನನ್ನ ಗುರು ನಾಟ್ಯ ಸರಸ್ವತಿ ಜಟ್ಟಿ ತಾಯಮ್ಮನವರ ಶೈಲಿ ನಾನುಳಿಸಲು ಪ್ರಯತ್ನಿಸಿದೆ. ಹಾಗೆಯೇ ನನ್ನ ಶಿಷ್ಯರೂ ಉಳಿಸಲಿ. ಅದರ ಕಂಪನ್ನು ಎಲ್ಲೆಡೆ ಹರಡಲಿ ಎಂದು ಹಾರೈಸುತ್ತೇನೆ ಎಂಬುದೇ ಇಂದಿಗೂ ಮೇಡಂರವರ ಕಳಕಳಿಯ ಸಂದೇಶ.




ಮುಂಬೈನ ಮೈಸೂರು ಅಸೋಸಿಯೇಷನ್ ವಜ್ರಮಹೋತ್ಸವದ ಸಂದರ್ಭದಲ್ಲಿ ರಾಜ್ಯಪಾಲ ಎ. ಎಸ್. ಬ್ಯಾನರ್ಜಿಯವರಿಂದ ಸನ್ಮಾನ

‘ಹುಟ್ಟಿದೆಲ್ಲೋ....
ಬೆಳೆದಿದ್ದೆಲ್ಲೋ....
ಏನೇನೋ ಜೀವನದಲ್ಲಿ ಬಂದರೂ ಗುರುಗಳ ಆಶೀರ್ವಾದದಿಂದ ಎಲ್ಲವನ್ನೂ ಎದುರಿಸಿ ಈವರಿಗೂ ನಡೆಸಿದ್ದಾಯಿತು. ನನಗೆ ಕಲೆಯ ಬಗ್ಗೆ ಮಾತನಾಡಲು ಬೇಸರವೇ ಇಲ್ಲ. ನನ್ನ ದೈವ ಕಲೆ. ನನ್ನ ಗುರುಗಳು ನನಗೆ ಕೊಟ್ಟ ವಿದ್ಯೆಯನ್ನು ಧ್ಯೇಯವಾಗಿಟ್ಟುಕೊಂಡು ನಾಲ್ಕು ಜನಕ್ಕೆ ಉಪಯೋಗವಾಗುವಂತೆ ಜೀವನ ನಡೆಸಿದ್ದೇನೆಂಬ ತೃಪ್ತಿ ನನಗಿದೆ.’

ಡಾ|| ಕೆ. ವೆಂಕಟಲಕ್ಷ್ಮಮ್ಮ

